24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 139 | ನವದೆಹಲಿ | ಬೆಲೆ ₹10 | ನವಂಬರ್ 16, 2026, ಸೋಮವಾರ

ಒಳಪುಟಗಳಲ್ಲಿ

ಭಾರತದ ಸರಕುಗಳಿಗೆ ಆದ್ಯತೆ: ಅಮೆರಿಕ ಒಪ್ಪಿಗೆ ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ - ಪು.4

ಬರ ನಿರ್ವಹಣೆ - ಆಧುನಿಕ ತಂತ್ರಜ್ಞಾನಕ್ಕೆ ಆದ್ಯತೆ- ಜಿಕೆವಿಕೆಯಲ್ಲಿ ಇಂದಿನಿಂದ ಮೂರು ದಿನಗಳ ಕಾಲ ಬೃಹತ್ ಕೃಷಿಮೇಳ - ಪು.5

ಕಲ್ಯಾಣ ಕರ್ನಾಟಕದಲ್ಲಿ ನವೋದ್ಯಮಗಳಿಗೆ ಉತ್ತೇಜನ- ಉದ್ಯಮ ಸ್ಥಾಪನೆಗೆ 50 ಲಕ್ಷ ವರೆಗೆ ಸಹಾಯಧನ: ಪ್ರಿಯಾಂಕ್ ಖರ್ಗೆ - ಪು.6

ಡಿಸಿ ಪ್ರಯತ್ನ ಯಶಸ್ವಿ, ಟನ್‌ಗೆ 3,500 ರೂ.ಗೆ ಒಪ್ಪಿಗೆ: ಲಾಭ ಹಂಚಿಕೆಯಲ್ಲೂ ಪಾಲು ಪಡೆದು ಸಂಭ್ರಮಿಸಿದ ರೈತರು - ಪು.7

ಮಹಿಳಾ ಸಚಿವರ ಆಯ್ಕೆ ಹೈಕಮಾಂಡ್ ತೀರ್ಮಾನ: ಸಿಎಂ ಡಿ.ಕೆ.ಶಿವಕುಮಾರ್

ಬೆಂಗಳೂರು, ನ.15: ಮಹಿಳಾ ಸಚಿವರ ಆಯ್ಕೆಯ ವಿಚಾರವನ್ನು ದೆಹಲಿಯ ನಮ್ಮ ಹೈಕಮಾಂಡ್ ಅವರ ಗಮನಕ್ಕೆ ತಂದಿದ್ದೇನೆ. ಈ ಪ್ರಕ್ರಿಯೆ ನಾಳೆ ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆದರೆ, ಈ ವಿಚಾರವಾಗಿ ಚರ್ಚಿಸಲು ನನ್ನನ್ನು ದೆಹಲಿಗೆ ಆಹ್ವಾನಿಸುತ್ತೇನೆ ಎಂದಿದ್ದಾರೆ. ಇದು ಆಗಬೇಕಾದ ಕೆಲಸ. ಖಂಡಿತ ಮಾಡುತ್ತೇವೆ" ಎಂದು ಸಿಎಂ ಡಿ. ಕೆ.ಶಿವಕುಮಾರ್ ಅವರು ಹೇಳಿದರು. ಸದಾಶಿವನಗರದ ನಿವಾಸದ ಬಳಿ ಹಾಗೂ ಭಾರತಿನಗರದಲ್ಲಿ ಮಾಧ್ಯಮಗಳಿಗೆ ಭಾನುವಾರ ಪ್ರತಿಕ್ರಿಯೆ ನೀಡಿದರು.

ಉಪಚುನಾವಣೆಗೆ ಸಿದ್ಧ; ಹಿರಿಯೂರಲ್ಲಿ ಪ್ರಜಾಸೇವೆ

ಚಳಿಗಾಲದ ಅಧಿವೇಶನ ನಡೆಯುವ ಬೆಳಗಾವಿಯ ಸುವರ್ಣಸೌಧದ ನಿರ್ವಹಣೆಯಲ್ಲಿ ಸಮಸ್ಯೆ ಇದೆಯಲ್ಲಾ ಎನ್ನುವ ಪ್ರಶ್ನೆಗೆ, "ಅದನ್ನು ವಿಧಾನಸಭಾಧ್ಯಕ್ಷರು ನೋಡಿಕೊಳ್ಳುತ್ತಾರೆ. ಸಮಸ್ಯೆಗಳ ನಿವಾರಣೆ ಮಾಡುತ್ತಾರೆ" ಎಂದರು.

ಪ್ರಧಾನಿಗಳಿಗೆ ಮೇಕೆದಾಟು ಯೋಜನೆ ಬಗ್ಗೆ ಮನವಿ ಮಾಡಿದಿರಿ, ಈ ಬಗ್ಗೆ ಚರ್ಚೆ ಮುಂದುವರಿಸುತ್ತೀರಾ ಎಂದು ಕೇಳಿದಾಗ, "ನಾನು ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಮನವಿ ಮಾಡಿದ್ದೇನೆ. ತಮಿಳುನಾಡು ಸರ್ಕಾರಕ್ಕೆ ಸತ್ಯದ ಅರಿವಾಗಿದೆ. ಆದರೂ ಅವರು ವಿರೋಧಿಸುತ್ತಿದ್ದಾರೆ. ಅದು ಅವರ ಹಕ್ಕು. ಅವರ ಧ್ವನಿಯನ್ನು ತಡೆಯಲು ಸಾಧ್ಯವಿಲ್ಲ. ಅವರ ಬಳಿಯೂ ಕಾನೂನು ತಜ್ಞರ ತಂಡವಿದೆ. ಮೇಕೆದಾಟು ವಿಚಾರವಾಗಿ ನಾವು ನಮ್ಮ ಕೆಲಸವನ್ನು ಮುಂದುವರಿಸುತ್ತೇವೆ" ಎಂದು ಹೇಳಿದರು.

ಪ್ರಧಾನಿಗಳೊಂದಿಗಿನ ನಿಮ್ಮ ಒಡನಾಟ ಬಿಜೆಪಿ ನಾಯಕರಿಗೆ ಬಿಸಿತುಪ್ಪ ಆಗಿದೆಯಲ್ಲ ಎಂದಾಗ, ನಾನು ಒಂದು ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಧಾನಮಂತ್ರಿ ಸ್ಥಾನಕ್ಕೆ ಎಷ್ಟು ಗೌರವ ಕೊಡಬೇಕೋ ಅದನ್ನು ಕೊಡಬೇಕು. ಅವರು ಒಂದು ರಾಜ್ಯದ ಮುಖ್ಯಮಂತ್ರಿಗೆ ಎಷ್ಟು ಗೌರವ ಕೊಡಬೇಕೋ ಅದನ್ನು ಕೊಡುತ್ತಾರೆ. ಚುನಾವಣೆ ಸಂದರ್ಭದಲ್ಲಿ ನಾವು ಸ್ಪರ್ಧೆ ಮಾಡೋಣ. ಆದರೆ, ಈಗ ಒಟ್ಟಾಗಿ ಜನರ ಅಭಿವೃದ್ಧಿ ಕೆಲಸ ಮಾಡೋಣ ಅಂತ ಹೇಳಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಆಸ್ತಿಗಳ ಮಾರ್ಗಸೂಚಿ ದರ ಏರಿಕೆ ಬಗ್ಗೆ ಮಾಹಿತಿ ಇಲ್ಲ

ಆಸ್ತಿಗಳ ಮಾರ್ಗಸೂಚಿ ದರ ಏರಿಕೆಯ ಬಗ್ಗೆ ಕೇಳಿದಾಗ, ಈ ಕುರಿತು ಈತನಕ ನನ್ನ ಗಮನಕ್ಕೆ ಮಾಹಿತಿ ಬಂದಿಲ್ಲ. ಬಹುಶಃ ಇಲಾಖೆ ಮಟ್ಟದಲ್ಲಿ ಈ ಬಗ್ಗೆ ಚರ್ಚೆ ನಡೆಯುತ್ತಿರಬಹುದು. ಆ ವಿಚಾರ ನನ್ನ ಬಳಿ ಬಂದಾಗ ನೋಡೋಣ" ಎಂದು ಹೇಳಿದರು.

ರೌಡಿನಿಗ್ರಹ ಪಡೆಯ ಬಗ್ಗೆ ಕೇಳಿದಾಗ, "ಬೆಂಗಳೂರು ನಗರದಲ್ಲಿ ರೌಡಿಗಳ ಅಟ್ಟಹಾಸವನ್ನು ನಿಯಂತ್ರಣ ಮಾಡಲು ಪ್ರತ್ಯೇಕ 'ರೌಡಿನಿಗ್ರಹ ಪಡೆ' ರಚನೆ ಮಾಡಲು ಮುಂದಾಗಿದೆ. ರೌಡಿಗಳ ಮೇಲೆ ಸ್ಥಳೀಯ ಪೊಲೀಸ್ ಠಾಣೆಯ ನಿಯಂತ್ರಣವನ್ನು ತಪ್ಪಿಸಿ, ಅದನ್ನು ನೇರವಾಗಿ ಕಮೀಷನರೇಟ್ ಅವರಿಗೆ ಒಪ್ಪಿಸುತ್ತೇವೆ. ರೌಡಿ ಚಟುವಟಿಕೆಗಳನ್ನು ನಿಗ್ರಹ ಪಡೆಯೇ ಮಟ್ಟ ಹಾಕುತ್ತದೆ. ರೌಡಿಗಳು ಸ್ಥಳೀಯ ಪೊಲೀಸರೊಂದಿಗೆ ಸಂಪರ್ಕದಲ್ಲಿ ಇರುತ್ತಾರೆ. ಎಲ್ಲದರ ಬಗ್ಗೆ ಮಾಹಿತಿ ಇದೆ. ಈ ಯಾವುದಕ್ಕೂ ಅವಕಾಶ ಕೊಡದೆ. ಭಯಮುಕ್ತ ಬೆಂಗಳೂರು ನಿರ್ಮಾಣ ನಮ್ಮ ಗುರಿ. ಈ ಹಿನ್ನೆಲೆಯಲ್ಲಿ ನಗರದಲ್ಲಿ ಸಣ್ಣ ದುರ್ಘಟನೆ ನಡೆಯಬಾರದು ಎನ್ನುವ ದೃಷ್ಟಿಯಿಂದ ರೌಡಿನಿಗ್ರಹ ಪಡೆ ರೂಪಿಸಿದ್ದೇವೆ" ಎಂದು ವಿವರಣೆ ನೀಡಿದರು. "ಡ್ರಗ್ಸ್‌ಮುಕ್ತ ಕರ್ನಾಟಕಕ್ಕೆ ಸರ್ಕಾರ ಮುಂದಾಗಿದ್ದು, ನಮ್ಮ ಪೊಲೀಸ್ ಅಧಿಕಾರಿಗಳು ಈ ಬಗ್ಗೆ ದೊಡ್ಡ ಮಟ್ಟದ ಶೋಧ ಕಾರ್ಯದಲ್ಲಿ ತೊಡಗಿದ್ದಾರೆ" ಎಂದು ಹೇಳಿದರು.



ಇಂದು ದೆಹಲಿಗೆ ಪಯಣ

ಹೊಸಮನೆ ಪೂರ್ಣವಾಗಿಲ್ಲ. ದಿನ ಚೆನ್ನಾಗಿದೆ ಎನ್ನುವ ಒಂದೇ ಕಾರಣಕ್ಕೆ ಸೋಮವಾರ ಮನೆ ಮಟ್ಟಿಗೆ ಪೂಜೆ ಮಾಡುತ್ತಿದ್ದೇವೆ. ಯಾರನ್ನೂ ಕರೆಯುತ್ತಿಲ್ಲ. ಸೋನಿಯಾ ಗಾಂಧಿ ಅವರ ಪುಸ್ತಕ ಬಿಡುಗಡೆ ಇರುವುದರಿಂದ ಮಧ್ಯಾಹ್ನ 12 ಗಂಟೆಗೆ ದೆಹಲಿಗೆ ಹೋಗುತ್ತಿದ್ದೇನೆ" ಎಂದು ಸಿಎಂ ತಿಳಿಸಿದರು.

ಎಸ್‌ಐಆರ್‌ನಲ್ಲಿ ಹೆಸರು ಡಿಲೀಟ್ ಆದವರಿಗೆ ರಿಲೀಫ್

ಫಾರ್ಮ್-6 ಸಲ್ಲಿಸಿದರೆ ಕೇಸ್ ಇಲ್ಲ; ಚುನಾವಣಾ ಆಯೋಗ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ ಇಸಿಐ

ನವದೆಹಲಿ: ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ಕರಡು ಮತದಾರರ ಪಟ್ಟಿಯಿಂದ ಹೆಸರು ಕೈಬಿಟ್ಟಿರುವ ಅರ್ಹ ಮತದಾರರಿಗೆ ಚುನಾವಣಾ ಆಯೋಗ ಮಹತ್ವದ ಭರವಸೆ ನೀಡಿದೆ. ಈ ಹಿಂದೆ ಮತದಾರರ ಪಟ್ಟಿಯಲ್ಲಿ ಹೆಸರು ಹೊಂದಿದ್ದವರು ಎಸ್‌ಐಆರ್ ಬಳಿಕ ಕರಡು ಪಟ್ಟಿಯಲ್ಲಿ ಹೆಸರು ಕಾಣಿಸದ ಕಾರಣ ಮತ್ತೆ ಮತದಾರರಾಗಿ ನೋಂದಾಯಿಸಿಕೊಳ್ಳಲು ಫಾರ್ಮ್-6 ಸಲ್ಲಿಸಿದರೆ ಅವರ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣ ದಾಖಲಿಸುವುದಿಲ್ಲ ಎಂದು ಚುನಾವಣಾ ಆಯೋಗ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ. ಈ ಸಂಬಂಧ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಚುನಾವಣಾ ಆಯೋಗ ಸ್ಪಷ್ಟನೆ ನೀಡಿದೆ. ಪ್ರಜಾಪ್ರತಿನಿಧಿ ಕಾಯ್ದೆ-1950ರ ಸೆಕ್ಷನ್ 31ರ ಅಡಿಯಲ್ಲಿ ಸುಳ್ಳು ಘೋಷಣೆ ಸಲ್ಲಿಸಿದ ಆರೋಪದ ಮೇಲೆ ಕ್ರಮ ಕೈಗೊಳ್ಳುವ ಆತಂಕದಿಂದ ಕೆಲವು ಮತದಾರರು ಫಾರ್ಮ್-6 ಸಲ್ಲಿಸಲು ಹಿಂದೇಟು ಹಾಕುತ್ತಿರುವುದು ಆಯೋಗದ ಗಮನಕ್ಕೆ ಬಂದಿತ್ತು. ಈ ಹಿನ್ನೆಲೆಯಲ್ಲಿ ಸ್ಪಷ್ಟನೆ ನೀಡಲಾಗಿದೆ.

ಆದರೆ, ಈ ವಿನಾಯಿತಿ ಕೆಲವು ಷರತ್ತುಗಳಿಗೆ ಒಳಪಟ್ಟಿದೆ. ಅರ್ಜಿದಾರರು ಈಗಾಗಲೇ ಬೇರೆ ಯಾವುದೇ ಲೋಕಸಭೆ ಅಥವಾ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನೋಂದಣಿಯಾಗಿರಬಾರದು. ಅಲ್ಲದೆ, ಫಾರ್ಮ್-6ರಲ್ಲಿ ಸಲ್ಲಿಸುವ ಘೋಷಣೆ ಕಾನೂನಿಗೆ ಅನುಗುಣವಾಗಿರಬೇಕು ಎಂದು ಆಯೋಗ ತಿಳಿಸಿದೆ. ಇದೇ ವೇಳೆ, ಎಸ್‌ಐಆರ್ ಸಂದರ್ಭದಲ್ಲಿ ಗೈರುಹಾಜರಿ, ಸ್ಥಳಾಂತರ, ಮರಣ ಅಥವಾ ನಕಲಿ ನೋಂದಣಿ (ASDD) ಕಾರಣಗಳಿಂದ ಮತದಾರರ ಪಟ್ಟಿಯಿಂದ ಹೊರಗುಳಿದವರನ್ನು ಮತ್ತೆ ಸೇರಿಸಿಕೊಳ್ಳಲು ಚುನಾವಣಾ ಆಯೋಗ ಕ್ರಮ ಕೈಗೊಂಡಿದೆ. ನವೆಂಬರ್ 6 ರಂದು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಚುನಾವಣಾಧಿಕಾರಿಗಳಿಗೆ ಈ ಸಂಬಂಧ ನಿರ್ದೇಶನ ನೀಡಲಾಗಿದೆ.


ಮತದಾರರು ತಮ್ಮ ಪ್ರಸ್ತುತ ಸಾಮಾನ್ಯ ವಾಸಸ್ಥಳಕ್ಕೆ ಸಂಬಂಧಿಸಿದ ಚುನಾವಣಾ ನೋಂದಣಾಧಿಕಾರಿ, ಸಹಾಯಕ ಚುನಾವಣಾ ನೋಂದಣಾಧಿಕಾರಿ ಅಥವಾ ಬೂತ್ ಮಟ್ಟದ ಅಧಿಕಾರಿ ಅವರಿಗೆ ಭರ್ತಿ ಮಾಡಿದ ಎನ್ಯೂಮರೇಷನ್ ಫಾರ್ಮ್ ಸಲ್ಲಿಸಬಹುದು. ಈ ಹಿಂದೆ ಫಾರ್ಮ್ ಸಲ್ಲಿಸದಿರುವುದಕ್ಕೆ ಕಾರಣ ತಿಳಿಸುವ ಅನೆಕ್ಸರ್-ಬಿ ದಾಖಲೆಯನ್ನೂ ಒದಗಿಸಬೇಕಾಗುತ್ತದೆ. ನೇರವಾಗಿ, ಕುಟುಂಬ ಸದಸ್ಯರ ಮೂಲಕ ಅಥವಾ ಇ-ಸಹಿ ಬಳಸಿ ಇಸಿಐನೆಟ್ ಮೂಲಕ ಆನ್‌ಲೈನ್‌ನಲ್ಲಿಯೂ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಎಸ್‌ಐಆರ್ ಪ್ರಕ್ರಿಯೆಯಲ್ಲಿ ಯಾವುದೇ ಅರ್ಹ ಮತದಾರರು ಅಂತಿಮ ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಕ್ರಮ ಕೈಗೊಳ್ಳಲಾಗುವುದು. ಅದೇ ಸಮಯದಲ್ಲಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಹೆಸರು ನೋಂದಣಿಯಾಗುವುದನ್ನು ತಡೆಯಲು ಅಗತ್ಯ ವ್ಯವಸ್ಥೆ ಮಾಡಲಾಗಿದೆ ಎಂದು ಚುನಾವಣಾ ಆಯೋಗ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.



ನವದೆಹಲಿಯಲ್ಲಿ ಭಾನುವಾರ ಭಗವಾನ್ ಬಿರ್ಸಾ ಮುಂಡಾ ಜನ್ಮದಿನದಂದು ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ನಂತರ, ಸಂಸತ್ ಆವರಣದಲ್ಲಿ ಆಯೋಜಿಸಲಾಗಿದ್ದ ಬುಡಕಟ್ಟು ಜನಾಂಗದವರ ಸಾಂಸ್ಕೃತಿಕ ಕಾರ್ಯಕ್ರಮವನ್ನು ಪ್ರಧಾನಿ ಮೋದಿ, ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ವೀಕ್ಷಿಸಿದರು.



ನಿತ್ಯ ಪಂಚಾಂಗ 16.11.2026 ಸೋಮವಾರ



ಶ್ರೀ ಪರಾಭವ ನಾಮ ಸಂವತ್ಸರ,
ದಕ್ಷಿಣಾಯನ ಶರದ್ ಋತು/
ಚಾಂದ್ರಮಾನ ಆಶ್ವಯುಜ-ಕಾರ್ತಿಕ ಮಾಸ

ಕಾರ್ತಿಕ ಶುದ್ಧ, ಸಪ್ತಮಿ,
ಶ್ರವಣ ನಕ್ಷತ್ರ,
ಕಾರ್ತಿಕ ಸೋಮವಾರ, ಮಹಾಸಪ್ತಮಿ,
ಯಾಜ್ಞವಲ್ಕ್ಯ ಜಯಂತಿ, ಸೋಮವಂಶ
ಸಹಸ್ರಾರ್ಜುನ ಜಯಂತಿ, ಮೈಸೂರು ರಥ

ದಿನ	ರಾಹುಕಾಲ	ಯಮಗಂಡ	ಗುಳಿಕಕಾಲ
	ರಾಹುಕಾಲ	ಯಮಗಂಡ	ಗುಳಿಕಕಾಲ
ಭಾನು	4.30 – 6.00	12.00 – 1.30	3.00 – 4.30
ಸೋಮ	7.30 – 9.00	10.30 – 12.00	1.30 – 3.00
ಮಂಗಳ	3.00 – 4.30	9.00 – 10.30	12.00 – 1.30
ಬುಧ	12.00 – 1.30	7.30 – 9.00	10.30 – 12.00
ಗುರು	1.30 – 3.00	6.00 – 7.30	9.00 – 10.30
ಶುಕ್ರ	10.30 – 12.00	3.00 – 4.30	7.30 – 9.00
ಶನಿ	9.00 – 10.30	1.30 – 3.00	6.00 – 7.30

ಸಚಿವ ಮಧು ಬಂಗಾರಪ್ಪಗೆ ಸನ್ಮಾನ



ವಿಜಯಪುರ, ನ.15: ಮಕ್ಕಳ ದಿನಾಚರಣೆ ಪ್ರಯುಕ್ತ ನಗರದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಶುಕ್ರವಾರ ರಾತ್ರಿ ನಗರಕ್ಕೆ ಆಗಮಿಸಿದ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರನ್ನು ಕಾಂಗ್ರೆಸ್ ಹಿರಿಯ ಮುಖಂಡ ಅಬ್ದುಲ್ ಹಮೀದ್ ಮುಶ್ರೀಫ್ ಅವರು ನಗರದ ಹೊರವಲಯದ ಬಾಗಲಕೋಟ ರಸ್ತೆ ಹತ್ತಿರ ಬರಮಾಡಿಕೊಂಡು ಆತ್ಮೀಯವಾಗಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ವಿಡಿಎ ಮಾಜಿ ಅಧ್ಯಕ್ಷ ಕನ್ನಾನ ಅಬ್ದುಲ್ ಹಮೀದ್ ಮುಶ್ರೀಫ್ ಸೇರಿದಂತೆ ವಿವಿಧ ಮುಖಂಡರು ಅಭಿಮಾನಿಗಳು ಹಾಗೂ ಕಾರ್ಯಕರ್ತರು ಇದ್ದರು.

ಬುಡಕಟ್ಟು ಸಮುದಾಯದೊಂದಿಗೆ ಸಂವಾದ ನಡೆಸಿದ ರಾಜ್ಯಪಾಲೆ ಡಾ. ಸುಧಾ ಯಾದವ್



ಚಿತ್ರದುರ್ಗ, ನ.15: ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಮುಟ್ಟಿಗರಹಳ್ಳಿಗೆ ಭೇಟಿ ನೀಡಿದ ರಾಜ್ಯಪಾಲ ಡಾ. ಸುಧಾ ಯಾದವ್ ಭಗವಾನ್ ಬಿರ್ಸಾ ಮುಂಡಾ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಗೌರವ ಅರ್ಪಿಸಿದರು. ಬುಡಕಟ್ಟು ಸಮುದಾಯಗಳ ಹಕ್ಕು ಮತ್ತು ಘನತೆಗಾಗಿ ಅವರು ನಡೆಸಿದ ಹೋರಾಟ, ತ್ಯಾಗ ಹಾಗೂ ಧೈರ್ಯವನ್ನು ಸ್ಮರಿಸಿದರು.ಬಳಿಕ ರಾಜ್ಯಪಾಲರು ಬುಡಕಟ್ಟು ಕುಟುಂಬಗಳೊಂದಿಗೆ ಸಂವಾದ ನಡೆಸಿ, ಅವರ ಸಮಸ್ಯೆಗಳು, ಆಶೋತ್ತರ ಹಾಗೂ ದೈನಂದಿನ ಸವಾಲುಗಳನ್ನು ಆಲಿಸಿದರು. ಅಭಿವೃದ್ಧಿಯ ಫಲಗಳು ಸಮಾಜದ ಪ್ರತಿಯೊಂದು ವರ್ಗಕ್ಕೂ ತಲುಪಬೇಕು ಎಂದ ಅವರು, ಗ್ರಾಮಸ್ಥರ ಜೀವನಮಟ್ಟ ಹಾಗೂ ಮೂಲಭೂತ ಸೌಲಭ್ಯಗಳ ಲಭ್ಯತೆ ಕುರಿತು ಮಾಹಿತಿ ಪಡೆದು ಕೊಂಡರು. ಸಂವಾದದ ಸಂದರ್ಭದಲ್ಲಿ ಶಿಕ್ಷಣ, ಶಾಲಾ ಸೌಲಭ್ಯಗಳು, ಕುಡಿಯುವ ನೀರು, ಪಡಿತರ ವಿತರಣೆ ಹಾಗೂ ಅಂಗನವಾಡಿ ಸೇವೆಗಳು, ಹೆಣ್ಣುಮಕ್ಕಳ ಶಿಕ್ಷಣಕ್ಕೆ ಎದುರಾಗುತ್ತಿರುವ ಸವಾಲು ಗಳು ಹಾಗೂ ಮಹಿಳಾ ಸ್ವಸಹಾಯ ಸಂಘಗಳ ಕಾರ್ಯನಿರ್ವಹಣೆ, ಸದಸ್ಯತ್ವ ಮತ್ತು ಚಟುವಟಿಕೆಗಳ ಬಗ್ಗೆಯೂ ವಿಚಾರಿಸಿದರು.

ಗ್ರಾಮಸ್ಥರು ಕುರಿ, ಮೇಕೆ ಮತ್ತು ಜಾನುವಾರುಗಳಿಗೆ ಮೇವು ಒದಗಿಸುವುದು, ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಅಂಗನವಾಡಿ ಕೇಂದ್ರಕ್ಕೆ ಪ್ರತ್ಯೇಕ ಕಟ್ಟಡ ನಿರ್ಮಿಸುವುದು ಸೇರಿದಂತೆ ಹಲವು ಪ್ರಮುಖ ಬೇಡಿಕೆಗಳನ್ನು ರಾಜ್ಯಪಾಲರ ಗಮನಕ್ಕೆ ತಂದರು. ಗ್ರಾಮಸ್ಥರ ಅಹವಾಲುಗಳನ್ನು ತಾಳ್ಮೆಯಿಂದ ಆಲಿಸಿದ ರಾಜ್ಯಪಾಲರು, ಈ ಸಮಸ್ಯೆಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾಡಳಿತಕ್ಕೆ ಸೂಚಿಸಿದರು.ಸರ್ಕಾರದ ಕಲ್ಯಾಣ ಯೋಜನೆಗಳ ಪ್ರಯೋಜನಗಳು ಅರ್ಹ ಫಲಾನುಭವಿಗಳಿಗೆ ತಲುಪು ವುದನ್ನು ಖಚಿತಪಡಿಸಿಕೊಳ್ಳಬೇಕು. ಚುನಾಯಿತ ಪ್ರತಿನಿಧಿಗಳೊಂದಿಗೆ ಸಮನ್ವಯ ಸಾಧಿಸಿ ಬುಡಕಟ್ಟು ಸಮುದಾಯದ ಸಮಸ್ಯೆಗಳಿಗೆ ಆದ್ಯತೆ ನೀಡುವಂತೆ ಜಿಲ್ಲಾಡಳಿತಕ್ಕೆ ಸೂಚಿಸಿದರು. ಮಳೆನೀರು ಕೊಯ್ಲು ಮತ್ತು ಜಲಸಂರಕ್ಷಣೆಗೆ ಹೆಚ್ಚಿನ ಮಹತ್ವ ನೀಡುವ ಮೂಲಕ ಸುಸ್ಥಿರ ನೀರಿನ ಲಭ್ಯತೆಯನ್ನು ಖಚಿತಪಡಿಸಿ ಕೊಳ್ಳಬೇಕು. ಜನರೊಂದಿಗೆ ನೇರವಾಗಿ ಸಂವಾದ ನಡೆಸಿ, ಅವರ ನೈಜ ಅಗತ್ಯಗಳನ್ನು ಅರಿತುಕೊಳ್ಳುವುದು ಹಾಗೂ ಆಡಳಿತಾತ್ಮಕ ಕ್ರಮಗಳ ಮೂಲಕ ಅವರ ಜೀವನದಲ್ಲಿ ಸುಧಾರಣೆ ತರುವುದು ಅತ್ಯಂತ ಮುಖ್ಯ ಎಂದು ರಾಜ್ಯಪಾಲರು ಅಭಿಪ್ರಾಯಪಟ್ಟರು.

ಶಿಕ್ಷಣ, ಮೂಲಭೂತ ಸೌಲಭ್ಯಗಳು, ಮಹಿಳಾ ಸಬಲೀಕರಣ ಮತ್ತು ಬುಡಕಟ್ಟು ಕುಟುಂಬಗಳ ಕಲ್ಯಾಣಕ್ಕೆ ವಿಶೇಷ ಗಮನ ನೀಡುವ ಮೂಲಕ ಸಮಗ್ರ ಹಾಗೂ ಎಲ್ಲರನ್ನೂ ಒಳಗೊಂಡ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ರಮ್ಯಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆಕಾಶ್ ಹಾಗೂ ಇತರ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಗಣ್ಯರು ಹಾಜರಿದ್ದರು.

ಡಾ.ಬಿ.ಆರ್.ಅಂಬೇಡ್ಕರ್–ಡಾ.ಬಾಬು ಜಗಜೀವನರಾಮ್ ಪುತ್ತಳಿ ಅನಾವರಣ

ದೇವನಹಳ್ಳಿ, ನ.15: ಜಾಲಿಗೆ ಅಂಬೇಡ್ಕರ್ ಸೇವಾಸಂಘದ ವತಿಯಿಂದ ಇತ್ತೀಚೆಗೆ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಬಾಬು ಜಗಜೀವನರಾಮ್ ಪುತ್ತಳಿ ಅನಾವರಣ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಂತರ ಮಾತನಾಡಿ ಎಲ್ಲಾ ಜಾತಿ, ವರ್ಗ ಧರ್ಮಗಳ ಸರ್ವತೋಮುಖ ಅಭಿವೃದ್ಧಿಗೆ ಒಂದು ಭವ್ಯವಾದ ಬೃಹತ್ ಸಂವಿಧಾನವನ್ನು ಕೊಟ ಮಹಾಮಾನವತಾವಾದಿ ಡಾ.ಬಿಆರ್. ಅಂಬೇಡ್ಕರ್ ಅವರು ಹಾಗೂ ಹಸಿರು ಕ್ರಾಂತಿಯ ಹರಿಕಾರ ಮಾಜಿ ಉಪ ಪ್ರಧಾನಮಂತ್ರಿ ಬಾಬು ಜಗಜೀವನ್ ರಾಮ್ ಪುತ್ತಳಿ ಅನಾವರಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಉದ್ಘಾಟಿಸಿದ್ದು ಸಂತಸ ತಂದಿದೆ ಎಂದರು

ಈ ದೇಶಕ್ಕೆ ಹಲವಾರು ನಾಯಕರ ಹೋರಾಟದ ಫಲವಾಗಿ ಸ್ವಾತಂತ್ರ್ಯ ಲಭಿಸಿತು ಜವಾಹರಲಾಲ್ ನೆಹರೂ ಅವರ ಜನ್ಮದಿನಾಚರಣೆ ಇಂದು ಮಹಾತ್ಮ ಗಾಂಧಿ, ಸುಭಾಷ್‌ಚಂದ್ರ ಬೋಸ್, ಮೌಲಾನಾ ಅಜಾದ್, ಜವಾಹರಲಾಲ್ ನೆಹರೂ ಜಗಜೀವನ್ ರಾಮ್ ಹೋರಾಟದ ಫಲವಾಗಿ ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು ಹಲವಾರು ವರ್ಷಗಳ ಜೈಲುವಾಸ ಅನುಭವಿಸಿದ ಜವಾಹರಲಾಲ್ ನೆಹರು ತ್ಯಾಗ ಈ ದೇಶಕ್ಕೆ ಹೆಚ್ಚಾಗಿದೆ ಎಂದರು

ಈ ರಾಷ್ಟ್ರದಲ್ಲಿ ಅಂದು ಮಹಾತ್ಮ ಗಾಂಧಿಯವರು ಜವಹಾರಲಾಲ್ ನೆಹರೂ ರವರು ಪ್ರಧಾನ ಮಂತ್ರಿಗಳಾಗಿದ್ದಾಗ ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿ ಅಂಬೇಡ್ಕರ್ ರವರ ಹೆಸರನ್ನು ಸೂಚನೆ ಮಾಡುವ ಮೂಲಕ ಈ ದೇಶಕ್ಕೆ ಒಂದು ಭವ್ಯ ಬೃಹತ್ ಸಂವಿಧಾನ ರಚನೆ ಮಾಡಿದರು

ಜಾಲಿಗೆ ಗ್ರಾಮ ಪಂಚಾಯತಿಯ ಅಂಬೇಡ್ಕರ್ ಸೇವಾ ಸಂಘವು ಇಂದು ಈಕಾರ್ಯಕ್ರಮ ಅರ್ಥ ಪೂರ್ಣವಾಗಿದೆ ಎರಡು ಮಹಾನ್ ವ್ಯಕ್ತಿಗಳ ಪುತ್ತಳಿಗಳ ಪ್ರತಿಷ್ಟಾಪನೆ ಮಾಡಿ ನಾವೆಲ್ಲಾರು ಒಂದು ಎಂದು ಸಂದೇಶ ತೋರಿರುವುದು ರಾಜ್ಯಕ್ಕೆ ಒಂದು ಸಂದೇಶ ರವಾನಿಸುವಂತಾಗಿದೆ ಎಂದರು

40 ವರ್ಷಗಳ ಸುದೀರ್ಘವಾದ ಹೋರಾಟದ ಫಲ ಒಳಮೀಸಲಾತಿ ಅಂದು ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಅನುಷ್ಠಾನವಾಗಿದ್ದು ಅಣ್ಣ ತಮ್ಮಂದಿರ ವ್ಯಾಜ್ಯದ ರೀತಿ ಇದ್ದ ಸಮಸ್ಯೆ ಬಗೆಹರಿದಿದ್ದು ಎಲ್ಲರೂ ಅಣ್ಣ–ತಮ್ಮಂದಿರಂತೆ ಒಟ್ಟಾಗಿ ಇರಬೇಕು ಹೋರಾಟಗಳು ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಆದರೆ ನಾವು ಮುಂದುವರೆದ ಸಮುದಾಯಗಳೊಂದಿಗೆ ಪ್ರೀತಿವಾತ್ಸಲ್ಯದಿಂದ ಹೊಗಬೇಕು ಆಗ ನಮ್ಮ ಅಭಿವೃದ್ಧಿ ಸಾಧ್ಯ ಎಂದರು

ದೇವನಹಳ್ಳಿ ತಾಲ್ಲೂಕಿನಲ್ಲಿ ರಸ್ತೆ, ಚರಂಡಿ ಯುಜಿಡಿ ಮುಂತಾದ ಮೂಲ ಸೌಕರ್ಯ ಕಾರ್ಯಗಳನ್ನು ಮಾಡುತ್ತಿದ್ದು ಇನ್ನೂ ಹೆಚ್ಚಿನ ಅಭಿವೃದ್ಧಿ ಕಾರ್ಯಕ್ರಮಗಳು ಮಾಡುವುದಿದ್ದು ಹಂತ ಹಂತವಾಗಿ ಮಾಡಲಾಗುವುದು, ದೇವನಹಳ್ಳಿಯ ಸರ್ವತೋಮುಖ ಅಭಿವೃದ್ಧಿಗೆ ಪ್ರಾಮಾಣಿಕ ವಾಗಿ ಪ್ರಯತ್ನವನ್ನು ಮಾಡುವುದು ನನ್ನ ಸಂಕಲ್ಪವಾಗಿದೆ ಎಂದರು.





40 ವರ್ಷಗಳ ಒಳಮೀಸಲಾತಿ ಹೋರಾಟ ಅಂತ್ಯ ಅಣ್ಣ ತಮ್ಮಂದಿರಂತೆ ಮೀಸಲಾತಿ ಭಾಗಾ ಮಾಡಿಕೊಂಡಿದ್ದು ಒಟ್ಟಿಗೆ ಹೋಗಬೇಕು. ಎಲ್ಲಾ ಜಾತಿ ಧರ್ಮ ಗಳ ಸರ್ವತೋಮುಖ ಅಭಿವೃದ್ಧಿಗೆ ಡಾ.ಬಿಆರ್.ಅಂಬೇಡ್ಕರ್ ರವರು ಸಂವಿಧಾನ ರಚಿಸಿದ್ದಾರೆ ಇದೆ ಅಭಿವೃದ್ಧಿಗೆ ಮೂಲ ಆದಾರ

ಕೆ.ಎಚ್. ಮುನಿಯಪ್ಪ
ಸಮಾಜ ಕಲ್ಯಾಣ ಸಚಿವ

ಸಾನಿಧ್ಯ ವಹಿಸಿದ್ದ ಪಾಲನಹಳ್ಳಿ ಮಠದ ಪೀಠಾಧ್ಯಕ್ಷ ಸಿದ್ದರಾಜು ಸ್ವಾಮೀಜಿ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ರಾಜಣ್ಣ, ಡಿಸಿಸಿ ಅಧ್ಯಕ್ಷ ಪ್ರಸನ್ನ ಕುಮಾರ್, ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಜಗನ್ನಾಥ್, ಬಿಐಎಎಪಿಎ ಮಾಜಿ ಅಧ್ಯಕ್ಷ ಶಾಂತಕುಮಾರ್, ದೇವನಹಳ್ಳಿ ಬ್ಲಾಕ್‌ನ ಅಧ್ಯಕ್ಷ ಕೆ.ಸಿ.ಮಂಜುನಾಥ್, ಜಾಲಿಗೆ ಮುನಿರಾಜು, ಬುಲ್ಲಹಳ್ಳಿ ರಾಜಪ್ಪ, ಹಾಗೂ ದಲಿತ ಮುಖಂಡರು ಇದ್ದರು.

ರಾಹುಲ್ ಗಾಂಧಿಯಿಂದ ಪ್ರಜಾಪ್ರಭುತ್ವದ ಬಗ್ಗೆ ಸುಳ್ಳು ಮಾಹಿತಿ ನೀಡುವ ವಿಫಲ ಯತ್ನ: ಬಸವರಾಜ ಬೊಮ್ಮಾಯಿ ಆರೋಪ

ಸತತ ಚುನಾವಣೆ ಸೋಲಿನಿಂದ ಹತಾಶರಾಗಿ ರಾಹುಲ್ ಗಾಂಧಿ ಸಂವಿಧಾನ ವಿರೋಧಿ ಹೇಳಿಕೆ ನೀಡುತ್ತಿದ್ದಾರೆ: ಬೊಮ್ಮಾಯಿ



ಬೆಂಗಳೂರು, ನ.15: ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿಯವರು 2014 ರಿಂದ ಭಾರತದಲ್ಲಿ ಪ್ರಜಾಪ್ರಭುತ್ವ ಸತ್ತಿದೆ ಎಂದು ಮತ್ತೊಮ್ಮೆ ಭಾರತವನ್ನು ಅವಮಾನಿಸುವ ರೀತಿಯಲ್ಲಿ, ಸಂವಿಧಾನ ವಿರೋಧಿಯಾಗಿ ಹಾಗೂ ಸಂಪೂರ್ಣ ಸುಳ್ಳು ಮಾಹಿತಿಯನ್ನು ಜನರಿಗೆ ನೀಡುವ ವಿಫಲ ಪ್ರಯತ್ನ ಮಾಡಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ರಾಹುಲ್ ಗಾಂಧಿ ಹೈದರಾಬಾದ್‌ನ ಭಾರತ್ ಸಮಿತಿಯಲ್ಲಿ, 2014ರಿಂದ ಭಾರತದಲ್ಲಿ ಪ್ರಜಾಪ್ರಭುತ್ವ ಸತ್ತುಹೋಗಿದೆ ಎಂಬ ಅಸತ್ಯ ಹಾಗೂ ಬಾಲಿಶ ಹೇಳಿಕೆಯನ್ನು ನೀಡಿರುವುದನ್ನು ಯಾರೂ ಕೂಡ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಯಾವ ಪಕ್ಷ ಸಂವಿಧಾನವನ್ನು ಮೊಟಕುಗೊಳಿಸಿ ಎಮರ್ಜೆನ್ಸಿಯನ್ನು ಹೇರಿತ್ತು ಹಾಗೂ ಯಾವ ಪಕ್ಷ ಸುಪ್ರೀಂ ಕೋರ್ಟ್‌ನ ಆದೇಶ ತಮ್ಮ ವಿರುದ್ಧ ಬಂದಾಗ ಅದರ ವಿರುದ್ಧವೇ ಕಾನೂನನ್ನು ರಚಿಸಿತ್ತು ಎಂಬುದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಇಂತಹ ಪಕ್ಷದಿಂದ ಪ್ರಜಾಪ್ರಭುತ್ವದ ಪಾಠವನ್ನು ಕೇಳಲು ಭಾರತದ ಜನತೆ ತಯಾರಿಲ್ಲ ಎಂದು ಹೇಳಿದ್ದಾರೆ.

ಎರಡನೆಯದಾಗಿ, ರಾಹುಲ್ ಗಾಂಧಿಯವರು 2014ರಿಂದ ಸತತವಾಗಿ ಸೋಲನ್ನು ಅನುಭವಿಸಿ, ಹತಾಶರಾಗಿ ಇಂತಹ ಹೇಳಿಕೆ ನೀಡುತ್ತಿದ್ದಾರೆ. ಅವರ ಈ ಹೇಳಿಕೆಯು ಮುಂದಿನ 2029ರ ಚುನಾವಣೆಯಲ್ಲಿಯೂ ಸೋಲನ್ನು ಒಪ್ಪಿಕೊಂಡಿದ್ದಾರೆ ಎಂಬುದನ್ನು ಪ್ರತಿಬಿಂಬಿಸುತ್ತದೆ. ಅವರು 2029ರ ಚುನಾವಣೆಯವರೆಗೆ ಕಾಯದೆ ಈ ರೀತಿಯ ಹೇಳಿಕೆಗಳನ್ನು ನೀಡುತ್ತಿರುವುದು ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷದ ನಾಯಕನ ಸ್ಥಾನಕ್ಕೆ ಶೋಭೆ ತರುವಂತಹದ್ದಲ್ಲ ಎಂದು ತಿಳಿಸಿದ್ದಾರೆ.

ಇವೆಲ್ಲಕ್ಕಿಂತಲೂ ಮಿಗಿಲಾಗಿ, ಭಾರತ ಜನತೆಗೆ ಪ್ರಜಾಪ್ರಭುತ್ವದ ಬಗ್ಗೆ ಇರುವ ಅಪಾರ ನಂಬಿಕೆ ಮತ್ತು ಅವರ ಪ್ರಜ್ಞಾವಂತ ಆಯ್ಕೆಗೆ ರಾಹುಲ್ ಗಾಂಧಿಯವರು ಅವಮಾನ ಮಾಡಿದಂತಾಗಿದೆ. ಆದ್ದರಿಂದ ಇಂತಹ ಹೇಳಿಕೆಗಳಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ನಾವು ಹೇಳಬೇಕಾಗಿದೆ. ಈ ಹಿಂದೆಯೂ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಇಂತಹ ಹೇಳಿಕೆಗಳನ್ನು ನೀಡಿದ್ದರಿಂದ ನರೇಂದ್ರ ಮೋದಿಯವರನ್ನು ಇನ್ನಷ್ಟು ಶಕ್ತಿಶಾಲಿಯನ್ನಾಗಿ ಮಾಡಿದೆ ಎಂಬುದನ್ನು ಕಾಂಗ್ರೆಸ್‌ನವರು ಅರ್ಥಮಾಡಿಕೊಳ್ಳಬೇಕಾಗಿದೆ ಎಂದು ಹೇಳಿದ್ದಾರೆ.

ರಾಮನಗರದಿಂದ ನಮ್ಮ ಕುಟುಂಬವನ್ನು ಹೊರಹಾಕಲು ಯಾರಿಂದಲೂ ಸಾಧ್ಯವಿಲ್ಲ: ಎಚ್.ಡಿ. ಕುಮಾರಸ್ವಾಮಿ ಗುಡುಗು

ರಾಮನಗರ, ನ.15: ರಾಮನಗರ ಜಿಲ್ಲೆಯಿಂದ ಜೆಡಿಎಸ್ ಹಾಗೂ ನಮ್ಮ ಕುಟುಂಬವನ್ನು ಹೊರಹಾಕುವುದಾಗಿ ಕೆಲವರು ಶಪಥ ಮಾಡಿದ್ದಾರೆ, ಆದರೆ ಅದು ಯಾರ ಕೈಯಲ್ಲೂ ಸಾಧ್ಯವಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಗುಡುಗಿದ್ದಾರೆ. ಬೆಂಗಳೂರು ದಕ್ಷಿಣ ಜಿಲ್ಲೆಯ (ರಾಮನಗರ ತಾಲೂಕು) ಹುಣಸನಹಳ್ಳಿ ಗ್ರಾಮದಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ದೊಡ್ಡಕುರುಬರಹಳ್ಳಿ ಗ್ರಾಮದಲ್ಲಿ ನಿಖಿಲ್ ಕುಮಾರಸ್ವಾಮಿ ಅವರಿಗೆ ದೇವಸ್ಥಾನ ಪ್ರವೇಶ ನಿರಾಕರಿಸಿದ ಘಟನೆ ಹಾಗೂ ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ವೈಖರಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.ದೊಡ್ಡಕುರುಬರಹಳ್ಳಿ ಗ್ರಾಮದಲ್ಲಿ ನಿಖಿಲ್ ಕುಮಾರಸ್ವಾಮಿ ಅವರಿಗೆ ದೇವಸ್ಥಾನ ಪ್ರವೇಶ ನಿರಾಕರಿಸುವ ಮೂಲಕ ಚಿಲ್ಲರೆ ರಾಜಕಾರಣ ಮಾಡಿದ್ದಾರೆ. 2004ರಲ್ಲಿ ನಾನು ಶಾಸಕನಾಗುವ ಮೊದಲು ದೇವರ ದರ್ಶನಕ್ಕೆ ಹೋದಾಗ ಹೊಸೂರು ಗ್ರಾಮದಲ್ಲೂ ಇದೇ ರೀತಿ ದೇವಸ್ಥಾನಕ್ಕೆ ಬೀಗ ಹಾಕಿದ್ದರು. ಅಂದು ನಮ್ಮ ಕಾರ್ಯಕರ್ತರು ಬೀಗ ಒಡೆದಿದ್ದರು. ಆದರೆ ಈಗ ಯಾವುದೇ ಘರ್ಷಣೆ ಆಗಬಾರದು ಎಂದು ನಿಖಿಲ್ ಕಾರ್ಯಕರ್ತರಿಗೆ ಶಾಂತವಾಗಿರಲು ಸೂಚಿಸಿದ್ದಾರೆ. ಕಾಂಗ್ರೆಸ್ ನಾಯಕರು ಇದನ್ನು ಅರ್ಥಮಾಡಿಕೊಳ್ಳಬೇಕು ಎಂದು ಕುಮಾರಸ್ವಾಮಿ ಹೇಳಿದರು. ಈ ಘಟನೆಯ ಬಗ್ಗೆ ಸ್ವತಃ ಕೆಲವು ಕಾಂಗ್ರೆಸ್ ನಾಯಕರೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ, ಅದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸೋಣ ಎಂದು ಎಚ್‌ಡಿಕೆ ವ್ಯಂಗ್ಯವಾಡಿದರು.ಇನ್ನು ಮುಂದೆ ತಿಂಗಳಲ್ಲಿ ಎರಡು ದಿನ ರಾಮನಗರ ಜಿಲ್ಲೆಯ ನಾಲ್ಕೂ ವಿಧಾನಸಭಾ ಕ್ಷೇತ್ರಗಳಲ್ಲಿ ನಿಖಿಲ್ ಜೊತೆ ನಾನೇ ಖುದ್ದು ಓಡಾಟ ನಡೆಸುತ್ತೇನೆ.



ಸರ್ಕಾರದಲ್ಲಿ ಆಗುತ್ತಿರುವ ದೌರ್ಜನ್ಯಗಳನ್ನು ಗಮನಿಸಿದ್ದೇನೆ. ನಮ್ಮ ಯುವಕರು ಮತ್ತು ಕಾರ್ಯಕರ್ತರಿಗೆ ರಕ್ಷಣೆ ನೀಡಿ ಉತ್ಸಾಹ ತುಂಬಲು ಮುಂದಾಗುತ್ತೇನೆ? ಎಂದು ಕುಮಾರಸ್ವಾಮಿ ಭರವಸೆ ನೀಡಿದರು. ಕೆಲವರು ತಾಲೂಕಿನ 'ಸಾಕ್ಷಿಗುಡ್ಡೆ' ಬಗ್ಗೆ ಮಾತನಾಡುತ್ತಾರೆ. ಕಳೆದ ಮೂರೂವರೆ ವರ್ಷಗಳಲ್ಲಿ ರಾಮನಗರದಲ್ಲಿ ಏನಾದರೂ ಬದಲಾವಣೆಯಾಗಿದೆಯಾ? ಈ ಸರ್ಕಾರದ್ದು ಕೇವಲ ಘೋಷಣೆಗಳ ಸಾಕ್ಷಿಗುಡ್ಡೆಯಷ್ಟೇ. ಕನಕಪುರದಲ್ಲಿ ಊರೂರು ಖಾಲಿ ಮಾಡಿ ಕಲ್ಲನ್ನು ವಿದೇಶಕ್ಕೆ ಕಳುಹಿಸಿದರು ಎಂದು ಕಿಡಿಕಾರಿದರು.ರಾಮನಗರ ನನಗೆ ರಾಜಕೀಯ ಜನ್ಮಕೊಟ್ಟ ಕ್ಷೇತ್ರ. ಕಾಂಗ್ರೆಸ್ ಸಹವಾಸ ಮಾಡಿದ್ದರಿಂದ ಹಾಗೂ ನಮ್ಮದೇ ಕೆಲ ತಪ್ಪುಗಳಿಂದ ಭದ್ರನೆಲೆ ಕಳೆದುಕೊಂಡೆವು. ಮುಂದೆ ನಾನು ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ ಬಗ್ಗೆ ಜನಾಭಿಪ್ರಾಯವಿದ್ದು, ಸೂಕ್ತ ಸಂದರ್ಭದಲ್ಲಿ ತೀರ್ಮಾನ ಮಾಡುತ್ತೇನೆ. ಮುಂಬರುವ ತಾಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆ ಎದುರಿಸುವ ಕುರಿತು ಬಿಜೆಪಿ ನಾಯಕರು ಚರ್ಚೆ ಮಾಡಿದ್ದು, ನಮ್ಮಲ್ಲೂ ಚರ್ಚೆ ನಡೆಯುತ್ತಿದೆ ಎಂದು ಎಚ್‌ಡಿಕೆ ತಿಳಿಸಿದರು.

ಸಂಸದ್ ಕ್ರೀಡಾ ಮಹೋತ್ಸವಕ

ಜನರ ಬದುಕಿನಲ್ಲಿ ಬದಲಾವಣೆ, ಯುವಜನತೆಗೆ ಅವಕಾಶ ಸೃಷ್ಟಿಸುವುದೇ ನಮ್ಮ ಗುರಿ: ಮುಖ್ಯಮಂತ್ರಿ

ಬೆಂಗಳೂರು, ನ.15: ಕಟ್ಟಡಗಳ ನಿರ್ಮಾಣದ ಜೊತೆಗೆ, ಜನರ ಬದುಕಿನಲ್ಲಿ ಬದಲಾವಣೆ ತರುವುದು ಮತ್ತು ಯುವಜನತೆಗೆ ಹೊಸ ಅವಕಾಶಗಳನ್ನು ಸೃಷ್ಟಿಸುವುದೇ ನಿಜವಾದ ಅಭಿವೃದ್ಧಿ" ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ಹೇಳಿದರು. ಭಾರತೀನಗರ ಪೊಲೀಸ್ ಠಾಣೆ ಬಳಿ ಭಾನುವಾರ ಆಯೋಜಿಸಿದ್ದ ಭಾರತೀನಗರ ಹಬ್ಬದಲ್ಲಿ ಸಮುದಾಯ ಭವನ, ಮಾಡರ್ನ್ ಟೆಕ್ನೋ ಜಿಮ್ ಹಾಗೂ ಬ್ಯಾಡ್ಮಿಂಟನ್ ಕೋರ್ಟ್ ಉದ್ಘಾಟಿಸಿ ಮಾತನಾಡಿದರು.

"ಯುವಜನರು ದೇಶದ ದೊಡ್ಡಆಸ್ತಿ. ಯುವಕರಲ್ಲಿ ನಾಯಕತ್ವ ಗುಣ ಬೆಳೆಸುವುದರ ಜತೆಗೆ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳು, ಸಾಮಾಜಿಕ ಸಾಮರಸ್ಯ ಮತ್ತು ಪರಿಸರ ಸಂರಕ್ಷಣೆಗೆ ಉತ್ತೇಜನ ನೀಡುವ ಉದ್ದೇಶದಿಂದ ರಾಜ್ಯಾದ್ಯಂತ 10 ಸಾವಿರ ಭಾರತ್ ಜೋಡೋ ಯುವ ಸಂಘಗಳನ್ನು ಸ್ಥಾಪಿಸಲಾಗಿದೆ. ಜಿಮ್, ಕ್ರೀಡಾ ಚಟುವಟಿಕೆಗಳಿಗೆ ಬರುವ ಯುವಕರನ್ನೂ ಈ ಸಂಘಗಳ ಸದಸ್ಯರನ್ನಾಗಿ ಮಾಡಬೇಕು" ಎಂದು ಸೂಚಿಸಲಾಗಿದೆ ಎಂದರು.





ಸಿಎಂ ಡಿ ಕೆ ಶಿವಕುಮಾರ್ ಅವರು ಭಾರತೀನಗರ ಪೊಲೀಸ್ ಠಾಣೆ ಬಳಿ ಆಯೋಜಿಸಲಾಗಿದ್ದ ಭಾರತಿ ನಗರ ಹಬ್ಬ, ಭಾರತಿ ನಗರ ಸಮುದಾಯ ಭವನ, ಮಾಡರ್ನ್ ಟೆಕ್ನೋ ಜಿಮ್ ಹಾಗೂ ಬ್ಯಾಡ್ಮಿಂಟನ್ ಕೋರ್ಟ್ ಅನ್ನು ಭಾನುವಾರ ಉದ್ಘಾಟಿಸಿದರು. ಸಚಿವರಾದ ಕೃಷ್ಣ ಬೈರೇಗೌಡ, ರಿಜ್ವಾನ್ ಅರ್ಷದ್, ಜಿಬಿಎ ಮುಖ್ಯ ಆಯುಕ್ತ ಡಾ. ಎಂ.ಮಹೇಶ್ವರರಾವ್, ಬೆಂಗಳೂರು ಕೇಂದ್ರ ವಲಯ ಪಾಲಿಕೆ ಆಯುಕ್ತ ಜಿ. ಜಗದೀಶ್ ಮತ್ತಿತರರು ಇದ್ದರು.

ಸುರಕ್ಷತೆ ದೃಷ್ಟಿಯಿಂದ ಬೆಂಗಳೂರು ನಿವಾಸಿಗಳ ಮಾಹಿತಿ ಸಂಗ್ರಹ:

"ನಗರದಲ್ಲಿ ವಾಸಿಸುವ ಜನರ ಸುರಕ್ಷತೆಯ ದೃಷ್ಟಿಯಿಂದ ಮನೆಮನೆಗಳಲ್ಲಿರುವ ನಿವಾಸಿಗಳ ವಿವರಗಳನ್ನು ಸಂಗ್ರಹಿಸುವ ಅಗತ್ಯವಿದೆ. ಬೆಂಗಳೂರಿನ ಮತದಾರರ ಪಟ್ಟಿಯಲ್ಲಿ 51 ಲಕ್ಷದಷ್ಟಿದ್ದ ಸಂಖ್ಯೆ 45 ಲಕ್ಷದಷ್ಟು ಕಡಿಮೆಯಾಗಿರುವ ವಿಚಾರವೂ ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ನಗರದಲ್ಲಿ ಯಾರು ಎಲ್ಲಿ ವಾಸಿಸುತ್ತಿದ್ದಾರೆ ಎಂಬ ಮಾಹಿತಿ ಪೊಲೀಸ್ ಇಲಾಖೆಯಲ್ಲೂ ಲಭ್ಯವಿರುವಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗುವುದು" ಎಂದು ಹೇಳಿದರು.

"ನಿರುದ್ಯೋಗಿಗಳಿಗೆ ನೆರವು ನೀಡುವ ನಿಟ್ಟಿನಲ್ಲಿ ಸರ್ಕಾರ ಹಲವು ಯೋಜನೆಗಳನ್ನು ರೂಪಿಸಿದೆ. ಬೀದಿಬದಿ ವ್ಯಾಪಾರಿಗಳ ಪುನರ್ವಸತಿಗೆ ಕ್ರಮ ಕೈಗೊಳ್ಳಲಾಗುತ್ತಿದ್ದು, ಈಗಾಗಲೇ 30 ಸಾವಿರ ಮಂದಿಯನ್ನು ಗುರುತಿಸಲಾಗಿದೆ. ಮೊದಲ ಹಂತದಲ್ಲಿ 1,500 ಮಂದಿಗೆ ವಾಹನಗಳನ್ನು ಒದಗಿಸಲು ಟೆಂಡರ್ ಕರೆಯಲಾಗಿದೆ. ಸಮಾಜಕಲ್ಯಾಣ ಇಲಾಖೆಯ ಮೂಲಕ 352 ಕೋಟಿ ಮೊತ್ತದ ವಿವಿಧ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದ್ದು, 15ರಿಂದ 17 ಸಾವಿರ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲು ಸಿದ್ಧತೆ ನಡೆದಿದೆ" ಎಂದು ತಿಳಿಸಿದರು. "ಎಥೆನಾಲ್ ಮಿಶ್ರಣದಿಂದ ವಾಹನಗಳಿಗೆ ಆಗಿರುವ ತೊಂದರೆಗಳ ಬಗ್ಗೆಯೂ ಸರ್ಕಾರ ಗಮನ ಹರಿಸಿದೆ. ವಾಹನಗಳ ಇಂಜಿನ್ ಹಾನಿ, ಮೈಲೇಜ್ ಕಡಿಮೆಯಾಗಿರುವುದು ಸೇರಿದಂತೆ ಗ್ರಾಹಕರಿಗೆ ಉಂಟಾಗಿರುವ ಸಮಸ್ಯೆಗಳ ಬಗ್ಗೆ ವಿರೋಧ ಪಕ್ಷಗಳು ಧ್ವನಿ ಎತ್ತುತ್ತಿಲ್ಲ" ಎಂದು ಟೀಕಿಸಿದರು. ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿಚಾರದಲ್ಲಿ ಕೇಂದ್ರ ಸರ್ಕಾರ ಜನಸ್ನೇಹಿಯಾಗಿಲ್ಲ. ಕೇಂದ್ರ ಸರ್ಕಾರ ತೆರಿಗೆ ಕಡಿಮೆ ಮಾಡಿದರೆ ರಾಜ್ಯವೂ ಬೆಲೆ ಕಡಿಮೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಿದೆ ಎಂದರು.

ಬೆಂಗಳೂರು ಎಲ್ಲ ಧರ್ಮ, ಸಮುದಾಯಗಳ ಜನರು ನೆಮ್ಮದಿಯಿಂದ ಬದುಕುವ ನಗರವಾಗಬೇಕು. ಹಿಂದೂ, ಕ್ರೈಸ್ತ, ಸಿಖ್, ಮುಸ್ಲಿಂ ಸೇರಿದಂತೆ ಎಲ್ಲ ಧರ್ಮದವರಿಗೂ ಸಂವಿಧಾನದ ಅಡಿಯಲ್ಲಿ ಸಮಾನ ರಕ್ಷಣೆ ನೀಡುವುದು ಸರ್ಕಾರದ ಬದ್ಧತೆ. ಕನ್ನಡದ ಭಾವನೆ ಮತ್ತು ಎಲ್ಲ ಜನರ ಬದುಕನ್ನು ರಕ್ಷಿಸುವ ಕೆಲಸವನ್ನು ಸರ್ಕಾರ ಮಾಡಲಿದೆ. ಯಾವುದೇ ಕೋಮುಸಂಘರ್ಷಕ್ಕೆ ಅವಕಾಶವಿಲ್ಲ ಎಂದರು.

ಶಿವಾಜಿನಗರ ಬೆಂಗಳೂರಿನ ಹೃದಯಭಾಗ

"ಶಿವಾಜಿನಗರ ಬೆಂಗಳೂರಿನ ಹೃದಯಭಾಗ. ಇಲ್ಲಿನ ಜನರ ಪ್ರೀತಿ ಮತ್ತು ವಿಶ್ವಾಸವೇ ನನಗೆ ದೊಡ್ಡ ಆಸ್ತಿ. ನಮ್ಮ ಸರ್ಕಾರ, ಪಕ್ಷ ಹಾಗೂ ನಾಯಕರನ್ನು ಶಿವಾಜಿನಗರದ ಜನತೆ ಎಂದಿಗೂ ಕೈಬಿಟ್ಟಿಲ್ಲ. ಉಪಚುನಾವಣೆಯ ಸಂದರ್ಭದಲ್ಲಿ ಹಲವು ಶಾಸಕರು ಪಕ್ಷ ತೊರೆದರೂ ಶಿವಾಜಿನಗರ ಕ್ಷೇತ್ರದ ಜನತೆ ಕಾಂಗ್ರೆಸ್ ಬೆನ್ನಿಗೆ ನಿಂತಿದ್ದರು. ಜಾತಿ, ಧರ್ಮ, ಭಾಷೆಗಳು ಬೇರೆ ಇರಬಹುದು. ಆದರೆ ನಮ್ಮೆಲ್ಲರ ಹೃದಯ ಒಂದೇ" ಎಂದರು.

"ಭಾರತ್ ಜೋಡೋ ಯುವ ಸಂಘಗಳಿಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಪ್ರತಿ ವಾರ್ಡ್‌ನಲ್ಲೂ 200ಕ್ಕೂ ಹೆಚ್ಚು ಸದಸ್ಯರು ಸೇರ್ಪಡೆಯಾಗಿದ್ದಾರೆ. 16ರಿಂದ 35 ವರ್ಷದ ಯುವಕರನ್ನು ಒಂದೇ ವೇದಿಕೆಯಲ್ಲಿ ಭೇಟಿ ಮಾಡಿ ಸಂವಾದ ನಡೆಸುವ ಉದ್ದೇಶವಿದೆ. ಇದಕ್ಕಾಗಿ ಭಾರತೀನಗರದಲ್ಲೇ ಯುವಕರ ಸಭೆ ಆಯೋಜಿಸುವಂತೆ ಸಚಿವ ರಿಜ್ವಾನ್ ಅರ್ಷದ್ ಅವರಿಗೆ ಸೂಚಿಸುವುದಾಗಿ" ತಿಳಿಸಿದರು.

ರಿಜ್ವಾನ್ ಅರ್ಷದ್ ಕ್ಷೇತ್ರದ ಯುವಕರಿಗೆ ಹೊಸ ಅವಕಾಶಗಳನ್ನು ಕಲ್ಪಿಸುತ್ತಿದ್ದಾರೆ. ಸಾಮಾನ್ಯ ಜನರು ಮದುವೆ, ಮುಂಜಿ, ನಾಮಕರಣ ಸೇರಿದಂತೆ ಕುಟುಂಬದ ಕಾರ್ಯಕ್ರಮಗಳಿಗೆ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಖಾಸಗಿ ಸಮುದಾಯ ಭವನಗಳನ್ನು ಅವಲಂಬಿಸಬೇಕಾದ ಪರಿಸ್ಥಿತಿ ಇದೆ. ಇದನ್ನು ತಪ್ಪಿಸಿ ಕಡಿಮೆ ವೆಚ್ಚದಲ್ಲಿ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾಗುವಂತೆ ಸಮುದಾಯ ಭವನ ನಿರ್ಮಿಸಲಾಗಿದೆ. ಜಿಮ್ ಮತ್ತು ಬ್ಯಾಡ್ಮಿಂಟನ್ ಕೋರ್ಟ್ ಯುವಕರ ಆರೋಗ್ಯ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗಲಿವೆ" ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

"ಬೆಂಗಳೂರು ಮಾತ್ರವಲ್ಲದೆ ಇಡೀ ರಾಜ್ಯದ ಅಭಿವೃದ್ಧಿಯೂ ಸರ್ಕಾರದ ಆದ್ಯತೆಯಾಗಿದೆ. ಬೆಂಗಳೂರಿನಿಂದ ಸಂಗ್ರಹವಾಗುವ ತೆರಿಗೆ ಆದಾಯದ ದೊಡ್ಡ ಪಾಲು ರಾಜ್ಯದ ಇತರ ಭಾಗಗಳಿಗೆ ಹಂಚಿಕೆಯಾಗುತ್ತದೆ. ಜನರಿಗೂ ಸೂಕ್ತ ಸೌಲಭ್ಯ ಮತ್ತು ಪ್ರೋತ್ಸಾಹ ನೀಡಬೇಕಿದೆ" ಎಂದರು.

"ಗ್ರಾಮೀಣಾಭಿವೃದ್ಧಿಗೆ ಪಂಚಾಯಿತಿಗಳ ಮೂಲಕ ಅನುದಾನ ಮೀಸಲಿಡಲಾಗಿದೆ. ರಾಜ್ಯದ ರಸ್ತೆಗಳ ಅಭಿವೃದ್ಧಿಗೆ 20 ಸಾವಿರದಿಂದ ?25 ಸಾವಿರ ಕೋಟಿ ಹಾಗೂ ನಗರಸಭೆ ಮತ್ತು ಪುರಸಭೆಗಳ ಅಭಿವೃದ್ಧಿಗೆ ಮುಂದಿನ ಒಂದು ವರ್ಷದಲ್ಲಿ 10 ಸಾವಿರ ಕೋಟಿ ರೂ. ವೆಚ್ಚ ಮಾಡುವ ಯೋಜನೆ ರೂಪಿಸಲಾಗಿದೆ. ಬೆಂಗಳೂರಿನಿಂದ ಬರುವ ಆದಾಯವನ್ನು ಇಡೀ ರಾಜ್ಯದ ಅಭಿವೃದ್ಧಿಗೆ ಹಂಚಿಕೆ ಮಾಡಲಾಗುತ್ತಿದೆ" ಎಂದು ವಿವರಿಸಿದರು.

"ಬೆಂಗಳೂರಿನಲ್ಲಿ ವಾಹನಗಳ ಸಂಖ್ಯೆ 1.40 ಕೋಟಿಗೆ ತಲುಪಿದ್ದು, ಸಂಚಾರ ದಟ್ಟಣೆ ದೊಡ್ಡ ಸವಾಲಾಗಿದೆ. ಕಿರಿದಾದ ರಸ್ತೆಗಳು, ಹೆಚ್ಚುತ್ತಿರುವ ವಾಹನಗಳ ಸಂಖ್ಯೆ ಹಾಗೂ ಕಟ್ಟಡಗಳ ತೆರವು ವಿಚಾರದಲ್ಲಿನ ಕಾನೂನು ತೊಡಕುಗಳಿಂದ ರಸ್ತೆ ಅಗಲೀಕರಣ ಸುಲಭವಲ್ಲ. ಒಂದು ಕಟ್ಟಡ ತೆರವು ವಿಚಾರ ನ್ಯಾಯಾಲಯಕ್ಕೆ ಹೋದರೆ ವರ್ಷಗಟ್ಟಲೆ ವಿಳಂಬವಾಗುವ ಸಾಧ್ಯತೆ ಇದೆ. ಹೀಗಾಗಿ ನಗರದ ಸಮಸ್ಯೆಗಳಿಗೆ ಪ್ರಾಯೋಗಿಕ ಪರಿಹಾರ ಕಂಡುಕೊಳ್ಳಲು ಸರ್ಕಾರ ಹಲವು ಚಿಂತನೆಗಳನ್ನು ನಡೆಸುತ್ತಿದೆ" ಎಂದರು.

6 ಬೆಂಗಳೂರಿನ ಹೊಸ ಪಾಲಿಕೆಗಳಿಂದ ಹೊಸ ನಾಯಕತ್ವ ಸೃಷ್ಟಿ

"ಬೆಂಗಳೂರು ನಗರವನ್ನು ಐದು ಪ್ರತ್ಯೇಕ ಪಾಲಿಕೆಗಳಾಗಿ ವಿಂಗಡಿಸುವ ಪ್ರಕ್ರಿಯೆಯಲ್ಲಿ ಶಾಸಕ ರಿಜ್ವಾನ್ ಅರ್ಷದ್ ಮಹತ್ವದ ಪಾತ್ರ ವಹಿಸಿದ್ದಾರೆ. ಈ ಸಂಬಂಧ ವಿಧಾನಸಭೆ ಮತ್ತು ವಿಧಾನಪರಿಷತ್ತಿನಲ್ಲಿ ಮಸೂದೆಗೆ ಒಪ್ಪಿಗೆ ದೊರೆತಿದ್ದು, ರಾಜ್ಯಪಾಲರ ಸಹಿಯೊಂದಿಗೆ ಅಧಿಸೂಚನೆಯೂ ಹೊರಬಿದ್ದಿದೆ. ಹೊಸ ವ್ಯವಸ್ಥೆಯಡಿ ಚುನಾವಣೆ ನಡೆಸಲು ನ್ಯಾಯಾಲಯದ ಅನುಮತಿ ಕೋರಲಾಗಿದೆ. ಅನುಮತಿ ದೊರೆತ ತಕ್ಷಣ ಚುನಾವಣೆ ನಡೆಸಿ, ಐದು ಪಾಲಿಕೆಗಳ ವ್ಯಾಪ್ತಿಯಲ್ಲಿ 369 ಹೊಸ ನಾಯಕರನ್ನು ಬೆಳೆಸುವ ಉದ್ದೇಶವಿದೆ" ಎಂದು ತಿಳಿಸಿದರು.

ಬೆಂಗಳೂರು ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಸರ್ಕಾರ ಆದ್ಯತೆ ನೀಡಿದೆ. ಅಪರಾಧ ಚಟುವಟಿಕೆ, ರೌಡಿಸಂ ಮತ್ತು ಮಾದಕ ವಸ್ತುಗಳ ಹಾವಳಿ ನಿಯಂತ್ರಣಕ್ಕೆ ವಿಶೇಷ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ರಾತ್ರಿ 12 ಗಂಟೆ ಅಥವಾ ಎರಡು ಗಂಟೆಯಾದರೂ ಜನರು ಭಯವಿಲ್ಲದೆ ಗೌರವಯುತವಾಗಿ ಓಡಾಡುವ ವಾತಾವರಣ ನಿರ್ಮಿಸುವುದು ಸರ್ಕಾರದ ಗುರಿಯಾಗಿದೆ. ಈ ನಿಟ್ಟಿನಲ್ಲಿ ಪ್ರತ್ಯೇಕ ಇಲಾಖೆಯೊಂದನ್ನು ರಚಿಸುವ ಕುರಿತು ಗೃಹ ಇಲಾಖೆಗೆ ಸೂಚನೆ ನೀಡಲಾಗಿದೆ" ಎಂದರು.

ಪ್ರಜಾಸೇವೆ ಆಂದೋಲನ ಸಭೆ

ಬಾಗಿಲಿಗೆ ಬಂತು ಸರ್ಕಾರ ಸೇವೆಗೆ ಇರಲಿ ಸಹಕಾರ





ಜನರ ಸಮಸ್ಯೆಗಳಿಗೆ ತ್ವರಿತ ಪರಿಹಾರ ಕಲ್ಪಿಸುವುದು ನಮ್ಮ ಉದ್ದೇಶ: ಸಚಿವ ಕೆ.ಎಚ್. ಮುನಿಯಪ್ಪ

ಬೆಂ.ಗ್ರಾ.ಜಿಲ್ಲೆ, ನ.14: ಜನಸಾಮಾನ್ಯರು, ಬಡವರು ರೈತರ ಸಮಸ್ಯೆ, ಅಹವಾಲು ಆಲಿಸಿ ಅವರಿಗೆ ತ್ವರಿತ ಪರಿಹಾರ ಒದಗಿಸುವುದು ನಮ್ಮ ಸರ್ಕಾರದ ಉದ್ದೇಶ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ಎಚ್.ಮುನಿಯಪ್ಪ ಹೇಳಿದರು.

ಹೊಸಕೋಟೆ ತಾಲ್ಲೂಕು ಆಡಳಿತ ಹಾಗೂ ತಾಲ್ಲೂಕು ಪಂಚಾಯಿತಿ ವತಿಯಿಂದ ಹೊಸಕೋಟೆ ತಾಲ್ಲೂಕಿನ ಕಸಬಾ ಹೋಬಳಿಯ ದೊಡ್ಡಹುಲ್ಲೂರು ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಇಂದು ನಡೆದ ಹೋಬಳಿ ಮಟ್ಟದ ಪ್ರಜಾ ಸೇವಾ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಅಹವಾಲು ಆಲಿಸಿ ಮಾತನಾಡಿದ ಅವರು ಮಹಾತ್ಮ ಗಾಂಧೀಜಿ, ಸರ್ದಾರ್ ವಲ್ಲಭಭಾಯಿ ಪಟೇಲ್, ಸುಭಾಷ್ ಚಂದ್ರ ಬೋಸ್ ಸೇರಿದಂತೆ ಅನೇಕ ಮಹನೀಯರು ದೇಶದ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ್ದಾರೆ. ರಾಜಕೀಯ ಎನ್ನುವುದು ಜನರ ಸೇವೆಗಾಗಿ ಎಂಬ ಗಾಂಧೀಜಿಯವರ ಆಶಯದಂತೆ ಜನರ ಭಾವನೆ, ಕಷ್ಟ ಹಾಗೂ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಸ್ಪಂದಿಸಬೇಕು. ಜನರ ಮತ ಪಡೆಯುವುದು ಎಷ್ಟು ಮುಖ್ಯವೋ, ಅವರ ಮನೆ ಬಾಗಿಲಿಗೆ ತೆರಳಿ ಸಮಸ್ಯೆಗಳನ್ನು ಆಲಿಸುವುದೂ ಅಷ್ಟೇ ಮುಖ್ಯ ಎಂದರು.

ಸಾಮಾನ್ಯ ಜನರು ತಮ್ಮ ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಪದೇಪದೇ ಅಲೆಯುವುದನ್ನು ತಪ್ಪಿಸುವ ಉದ್ದೇಶದಿಂದ ಮುಖ್ಯಮಂತ್ರಿ ರೂಪಿಸಿರುವ ಈ ಕಾರ್ಯಕ್ರಮದಡಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಜನರ ಮನೆ ಬಾಗಿಲಿಗೆ ತೆರಳಿ ಅಹವಾಲುಗಳನ್ನು ಸ್ವೀಕರಿಸಿ ಪರಿಹಾರ ಒದಗಿಸುತ್ತಿದ್ದಾರೆ. ಜಿಲ್ಲಾಧಿಕಾರಿಗಳು, ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಂದೇ ವೇದಿಕೆಗೆ ತಂದು ಜನರ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಕಲ್ಪಿಸುವ ಗುರಿ ಹೊಂದಲಾಗಿದೆ ಎಂದು ಹೇಳಿದರು.

ಶಾಸಕ ಶರತ್‌ಬಚ್ಚೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಸಾರ್ವಜನಿಕರ ಮನೆ ಬಾಗಿಲಿಗೆ ನಮ್ಮ ಸರ್ಕಾರ ಹೋಗಿ ಅವರ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಲು ಪ್ರಜಾಸೇವಾ ಆಂದೋಲನ ಸಭೆ ಆಯೋಜಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಗಳ ಆಶಯದಂತೆ ಈಗ ಎಲ್ಲಾ ತಾಲೂಕು, ಹೋಬಳಿ ಮಟ್ಟದಲ್ಲಿ ಸಭೆ ಆಯೋಜಿಸಲಾಗಿದೆ. ಸಾರ್ವಜನಿಕರು ಕಚೇರಿಗೆ ಅಲೆದಾಡುವುದನ್ನು ತಪ್ಪಿಸಲು ಜನಪ್ರತಿನಿಧಿಗಳು, ಅಧಿಕಾರಿಗಳು ಜನರ ಬಳಿಗೆ ತೆರಳಿ ಸಮಸ್ಯೆ ಆಲಿಸುವರು. ಇಂದು ನಡೆದ ಸಭೆಯಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಒಟ್ಟು 499 ಅರ್ಜಿಗಳನ್ನು ಸಾರ್ವಜನಿಕರಿಂದ ಸ್ವೀಕರಿಸಲಾಗಿದ್ದು, ಸ್ವೀಕೃತಗೊಂಡ ಎಲ್ಲಾ ಅರ್ಜಿಗಳನ್ನು ಸಂಬಂಧಪಟ್ಟ ಇಲಾಖೆಗಳ ಪರಿಶೀಲನೆಗೆ ಕಳುಹಿಸಲಾಗಿದೆ. ನಿಯಮಾನುಸಾರ ಶೀಘ್ರವೇ ಎಲ್ಲರಿಗೂ ನ್ಯಾಯಯುತ ಪರಿಹಾರ ಹಾಗೂ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಸ್ವಯಂ ಉದ್ಯೋಗಕ್ಕೆ ಉತ್ತೇಜನ: ಎಸ್‌ಟಿ ಸಮುದಾಯದವರಿಗಾಗಿ ನೂತನ ಮೊಬೈಲ್ ಕಿಚನ್ ಯೋಜನೆ ಜಾರಿ – ಸಚಿವ ಟಿ. ರಘುಮೂರ್ತಿ



ಪರಿಶಿಷ್ಟ ಪಂಗಡ ಸಮುದಾಯದವರ ಆರ್ಥಿಕ ಸಬಲೀಕರಣವಾಗಲಿದೆ ಮತ್ತು ಮುಖ್ಯವಾಗಿ ಅನಿಯಂತ್ರಿತ ಬೀದಿ ಮಾರಾಟಕ್ಕೆ ಹೋಲಿಸಿದರೆ ಪ್ರಮಾಣೀಕೃತ ಮೊಬೈಲ್ ಘಟಕಗಳು ಉತ್ತಮ ಮತ್ತು ಗುಣಮಟ್ಟದ ಆಹಾರ ಒದಗಿಸಬಹುದಾಗಿದೆ. ಪರಿಶಿಷ್ಟ ಪಂಗಡದ ಸಮುದಾಯದವರಿಗೆ ಸ್ವಯಂ ಉದ್ಯೋಗ ಕೈಗೊಳ್ಳುವ ಯೋಜನೆಗಳಿಗೆ ಜಾಲನೆ ನೀಡಲಾಗುತ್ತಿದೆ. ಮುಂದೆಯೂ ಈ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಈ ಯೋಜನೆ ಸಾವಿರಾರು ಮಂದಿಗೆ ನೆರವಾಗಲಿ, ಅವರು ಇನ್ನಷ್ಟು ಸಾವಿರಾರು ಮಂದಿಗೆ ಉದ್ಯೋಗ ಕೊಡಿಸಲಿ ಎನ್ನುವುದೇ ನಮ್ಮ ಉದ್ದೇಶ.

– ಟಿ. ರಘುಮೂರ್ತಿ

ಪರಿಶಿಷ್ಟ ಪಂಗಡಗಳ ಕಲ್ಯಾಣ ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು.

ಬೆಂಗಳೂರು, ನ.15: ಪರಿಶಿಷ್ಟ ಪಂಗಡಗಳ ಯುವಕ/ಯುವತಿಯರಿಗೆ ಉದ್ಯೋಗ ಅವಕಾಶಗಳನ್ನು ಒದಗಿಸಬೇಕು ಎಂಬ ಮುಖ್ಯ ಧ್ಯೇಯದೊಂದಿಗೆ ಕಾಂಗ್ರೆಸ್ ಸರ್ಕಾರ ಈಗ ಮಹತ್ವದ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಮುಂದಾಗಿದೆ. ಇದರಿಂದ ಪರಿಶಿಷ್ಟ ಪಂಗಡದ ಸಮುದಾಯದವರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಬೇಕು ಎಂಬ ಆಶಯವನ್ನು ಹೊಂದಿರುವ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಟಿ. ರಘುಮೂರ್ತಿ ಅವರ ಕಾಳಜಿಯಿಂದ ಈ ವಿಶೇಷ ಸೌಲಭ್ಯ ಜಾರಿಗೆ ಬರುತ್ತಿದೆ.

ಪರಿಶಿಷ್ಟ ಪಂಗಡದ ಯುವಕ/ಯುವತಿಯರಿಗೆ ಫಾಸ್ಟ್ ಫುಡ್ ಟ್ರಕ್ ಟ್ರೈಲರ್/ಮೊಬೈಲ್ ಕಿಚನ್ ಫುಡ್ ಕಿಯೋಸ್ಕ್ ಆರಂಭಿಸಲು ಪರಿಶಿಷ್ಟ ಪಂಗಡಗಳ ಇಲಾಖೆಯ ನಿಗಮಗಳ ಉದ್ಯಮಶೀಲತಾ ಅಭಿವೃದ್ಧಿ ಯೋಜನೆಯಡಿ ಅವಕಾಶ ಕಲ್ಪಿಸಲಾಗುತ್ತಿದೆ. ಇದಕ್ಕಾಗಿ ಘಟಕ ವೆಚ್ಚದ ಶೇ. 75ರಷ್ಟು ಅಥವಾ ಗರಿಷ್ಠ 4 ಲಕ್ಷ ರೂಪಾಯಿಗಳವರೆಗೆ ಸಹಾಯಧನವನ್ನು ನೀಡಲಾಗುತ್ತದೆ. ಈ ವಿಶೇಷ ಯೋಜನೆಗೆ ಕಳೆದ ಸಚಿವ ಸಂಪುಟದಲ್ಲಿ ಅನುಮೋದನೆ ನೀಡಲಾಗಿದೆ.

ಕಳೆದ ಬಜೆಟ್‌ನಲ್ಲಿ ಈ ಯೋಜನೆ ಆರಂಭಿಸುವ ಬಗ್ಗೆ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದರು. ನಂತರ ರಾಜಕೀಯ ಬೆಳವಣಿಗೆಯಲ್ಲಿ ಪರಿಶಿಷ್ಟ ಪಂಗಡದ ಕಲ್ಯಾಣ ಇಲಾಖೆಯ ಸಚಿವರಾಗಿ ಟಿ. ರಘುಮೂರ್ತಿ ಜವಾಬ್ದಾರಿ ವಹಿಸಿಕೊಂಡ ನಂತರ ಇದನ್ನು ಕಾರ್ಯರೂಪಕ್ಕೆ ತರುವ ಕುರಿತು ಗಮನ ಹರಿಸಿದರು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಇಲಾಖೆಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದ ಸಚಿವ ಸಂಪುಟ ಸಭೆಯಲ್ಲಿ ಚರ್ಚೆಯಾಗುವಂತೆ ಮುತುವರ್ಜಿ ವಹಿಸಿದರಲ್ಲದೇ ಅದಕ್ಕೆ ಅನುಮೋದನೆ ದೊರೆಯುವಂತೆ ಕ್ರಮ ವಹಿಸಿದ್ದಾರೆ. ಉದ್ದೇಶಿಸಿರುವ ಯೋಜನೆಯಡಿ ಅರ್ಹ ಫಲಾನುಭ

ಬುಡಕಟ್ಟು ಜನರ ಕಲ್ಯಾಣಕ್ಕೆ ಹಿಂದಿನ ಸರ್ಕಾರಗಳ ನಿರ್ಲಕ್ಷ್ಯ: ಪ್ರಧಾನಿ ಟೀಕೆ

- ನಕ್ಸಲ್ ಹಿಂಸಾಚಾರದಿಂದ ಬುಡಕಟ್ಟು ಸಮುದಾಯಕ್ಕೆ ಹೆಚ್ಚಿನ ಹಾನಿ
- 3 ಸಾವಿರ ಕೋಟಿ ಮೌಲ್ಯದ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ



ನವದೆಹಲಿ,ನ15: ಹಿಂದಿನ ಸರ್ಕಾರಗಳು ಬುಡಕಟ್ಟು ಸಮುದಾಯದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಮತ್ತು ಅವರ ಕಲ್ಯಾಣಕ್ಕಾಗಿ ಕ್ರಮ ಕೈಗೊಳ್ಳುವಲ್ಲಿ ನಿರ್ಲಕ್ಷ್ಯ ತೋರಿದ್ದವು ಎಂದು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದಾರೆ. ಭಾನುವಾರ ಮಹಾರಾಷ್ಟ್ರದ ಗಡ್ಚಿರೋಲಿಯಲ್ಲಿ ನಡೆದ ಜನಜಾತೀಯ ಗೌರವ್ ದಿವಸ್ ಕಾರ್ಯಕ್ರಮದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿದ ಅವರು, ನಕ್ಸಲ್ ಹಿಂಸಾಚಾರದಿಂದ ಬುಡಕಟ್ಟು ಸಮುದಾಯವೇ ಹೆಚ್ಚಿನ ತೊಂದರೆ ಅನುಭವಿಸಿದೆ. ನಕ್ಸಲರು ಬುಡಕಟ್ಟು ಜನರ ಮತದಾನದ ಹಕ್ಕುಗಳನ್ನು ಕಸಿದುಕೊಂಡಿದ್ದರೂ ಹಿಂದಿನ ಸರ್ಕಾರಗಳು ಮೌನ ವಹಿಸಿದ್ದವು ಎಂದು ಆರೋಪಿಸಿದರು.

ಬುಡಕಟ್ಟು ಸಮುದಾಯದ ಅಭಿವೃದ್ಧಿಗಾಗಿ ತಮ್ಮ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದ್ದು, ಈ ಪ್ರದೇಶಗಳ ಅಭಿವೃದ್ಧಿಗೆ ಒಂದು ಲಕ್ಷ ಕೋಟಿ ರೂಗಳಿಗೂ ಅಧಿಕ ಅನುದಾನ ನೀಡಲಾಗಿದೆ ಎಂದು ತಿಳಿಸಿದರು. ದೇಶದ ಹಲವು ಬುಡಕಟ್ಟು ಪ್ರದೇಶಗಳಲ್ಲಿ ಹಿಂದೆ ಮೂಲಸೌಕರ್ಯಗಳ ಕೊರತೆ ಇತ್ತು. ಶಿಕ್ಷಣ, ಆರೋಗ್ಯ, ಜೀವನೋಪಾಯ ಹಾಗೂ ಸಮುದಾಯದ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ ಎಂದರು.

ಭಗವಾನ್ ಬಿರ್ಸಾ ಮುಂಡಾ 151ನೇ ಜನ್ಮದಿನದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಸುಮಾರು 3 ಸಾವಿರ ಕೋಟಿ ರೂಪಾಯಿ ಮೌಲ್ಯದ 246 ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಿ ಚಾಲನೆ ನೀಡಿದರು ಹಾಗೂ ಹಲವು ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು. ಇವುಗಳಲ್ಲಿ 173 ಯೋಜನೆಗಳನ್ನು ಉದ್ಘಾಟಿಸಲಾಗಿದ್ದು, ಬುಡಕಟ್ಟು ವಿದ್ಯಾರ್ಥಿಗಳಿಗಾಗಿ 38 ಏಕಲವ್ಯ ಮಾದರಿ ವಸತಿ ಶಾಲೆಗಳು ಹಾಗೂ ಪ್ರಧಾನಮಂತ್ರಿ ಜನಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನದಡಿ 100 ಬಹುಪಯೋಗಿ ಕೇಂದ್ರಗಳು ಸೇರಿವೆ. ಉಳಿದಂತೆ 19 ಏಕಲವ್ಯ ಮಾದರಿ ವಸತಿ ಶಾಲೆಗಳು, 12 ಬುಡಕಟ್ಟು ಬಹುಪಯೋಗಿ ಮಾರುಕಟ್ಟೆ ಕೇಂದ್ರಗಳು ಸೇರಿದಂತೆ 73 ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಯಿತು.

ಅರುಣಾಚಲ ಪ್ರದೇಶದ ಇಟಾನಗರದಲ್ಲಿ ಬುಡಕಟ್ಟು ಸಂಶೋಧನಾ ಸಂಸ್ಥೆಯ ಕಟ್ಟಡ ಹಾಗೂ ಮಿಜೋರಾಂನ ಐಜವಾಲ್‌ನಲ್ಲಿ ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರರ ಸಂಗ್ರಹಾಲಯವನ್ನೂ ಉದ್ಘಾಟಿಸಲಾಯಿತು. ಕಾರ್ಯಕ್ರಮದಲ್ಲಿ ವಿವಿಧ ರಾಜ್ಯಗಳ ಬುಡಕಟ್ಟು ಸಮುದಾಯದ ಫಲಾನುಭವಿಗಳೊಂದಿಗೆ ಮೋದಿ ಸಂವಾದ ನಡೆಸಿದರು.

ಗುಜರಾತ್‌ನ ವಜೀರ್ ಅವರು ಬಿದಿರು ಉತ್ಪನ್ನಗಳ ತಯಾರಿಕೆಗೆ ಪಡೆದ ತರಬೇತಿ ಹಾಗೂ ಸರ್ಕಾರಿ ಯೋಜನೆಗಳಿಂದ ದೊರೆತ ನೆರವಿನ ಕುರಿತು ವಿವರಿಸಿದರು. ಈ ವೇಳೆ ಬ್ರಿಟಿಷರ ಕಾಲದಲ್ಲಿ ಬಿದಿರನ್ನು ಮರವೆಂದು ವರ್ಗೀಕರಿಸಿ ಅದರ ಕಟಾವಿಗೆ ನಿರ್ಬಂಧ ಹೇರಿದ್ದ ಕಾನೂನನ್ನು ಸ್ವಾತಂತ್ರ್ಯಾನಂತರವೇ ರದ್ದುಗೊಳಿಸಬೇಕಿತ್ತು ಎಂದು ಮೋದಿ ಅಭಿಪ್ರಾಯಪಟ್ಟರು. ತಮ್ಮ ಸರ್ಕಾರ ಆ ನಿರ್ಬಂಧವನ್ನು ತೆಗೆದುಹಾಕಿ ಬುಡಕಟ್ಟು ಜನರಿಗೆ ಬಿದಿರಿನ ಮೇಲಿನ ಹಕ್ಕುಗಳನ್ನು ಕಲ್ಪಿಸಿದೆ ಎಂದರು.

ಕಾಂಗ್ರೆಸ್‌ಗೆ 50-65 ಕ್ಷೇತ್ರ ಬಿಟ್ಟುಕೊಡಲು ಎಸ್‌ಪಿ ಒಲವು



- 181 ಕ್ಷೇತ್ರಗಳ ಬೇಡಿಕೆಗೆ ಸಮಾಜವಾದಿ ಪಕ್ಷದ ಸಂಸದನ ವಿರೋಧ
- ಗೆಲ್ಲುವ ಸಾಮರ್ಥ್ಯ ಆಧರಿಸಿ ಕ್ಷೇತ್ರ ಹಂಚಿಕೆಗೆ ಒತ್ತಾಯ

ಲಖನೌ,ನ.15: ಉತ್ತರ ಪ್ರದೇಶದ 2027ರ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷದ ನಡುವಿನ ಕ್ಷೇತ್ರ ಹಂಚಿಕೆ ವಿಚಾರದಲ್ಲಿ ಭಿನ್ನಾಭಿಪ್ರಾಯ ಮೂಡಿದೆ. 403 ಸದಸ್ಯ ಬಲದ ವಿಧಾನಸಭೆಯಲ್ಲಿ 181 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಬೇಡಿಕೆ ಇಟ್ಟಿರುವುದಕ್ಕೆ ಸಮಾಜವಾದಿ ಪಕ್ಷದ ಹಿರಿಯ ನಾಯಕರು ವಿರೋಧ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್‌ಗೆ 50ರಿಂದ 65 ಕ್ಷೇತ್ರಗಳನ್ನು ಮಾತ್ರ ಬಿಟ್ಟುಕೊಡಬೇಕು ಎಂಬ ಅಭಿಪ್ರಾಯವನ್ನು ಸಮಾಜವಾದಿ ಪಕ್ಷದ ಹಿರಿಯ ನಾಯಕ ಹಾಗೂ ಸಂಸದ ಶಿವಪಾಲ್ ಸಿಂಗ್ ಪಟೇಲ್ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ ಸಲ್ಲಿಸಿರುವ 181 ಕ್ಷೇತ್ರಗಳ ಪಟ್ಟಿಗೆ ಇನ್ನೂ ಅಂತಿಮ ನಿರ್ಧಾರ ಕೈಗೊಂಡಿಲ್ಲ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಅಖಿಲೇಶ್ ಯಾದವ್ ಈ ಕುರಿತು ಅಂತಿಮ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಕ್ಷೇತ್ರ ಹಂಚಿಕೆ ವೇಳೆ ಕೇವಲ ಸಂಖ್ಯೆಗೆ ಆದ್ಯತೆ ನೀಡದೆ, ಅಭ್ಯರ್ಥಿಗಳ ಗೆಲ್ಲುವ ಸಾಮರ್ಥ್ಯ, ಕ್ಷೇತ್ರಗಳಲ್ಲಿನ ಪ್ರಸ್ತುತ ರಾಜಕೀಯ ಪರಿಸ್ಥಿತಿ ಹಾಗೂ ಪಕ್ಷಗಳ ಚುನಾವಣಾ ಬಲವನ್ನು ಪರಿಗಣಿಸಬೇಕು ಎಂಬುದು ಸಮಾಜವಾದಿ ಪಕ್ಷದ ನಾಯಕರ ಅಭಿಪ್ರಾಯವಾಗಿದೆ. ಕಾಂಗ್ರೆಸ್ಸಿಗೆ ಹೆಚ್ಚಿನ ಕ್ಷೇತ್ರಗಳನ್ನು ನೀಡಿದರೆ ಪಕ್ಷದ ತಳಮಟ್ಟದ ಕಾರ್ಯಕರ್ತರ ಆತ್ಮವಿಶ್ವಾಸದ ಮೇಲೆ ಪರಿಣಾಮ ಬೀರಬಹುದು ಎಂಬ ಆತಂಕವನ್ನೂ ಎಸ್ಪಿ ನಾಯಕರು ವ್ಯಕ್ತಪಡಿಸಿದ್ದಾರೆ.

2022ರ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ 399 ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಕೇವಲ ಎರಡು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಸಮಾಜವಾದಿ ಪಕ್ಷ 347 ಕ್ಷೇತ್ರಗಳಲ್ಲಿ ಸ್ಪರ್ಧಿಸಿ 111 ಕ್ಷೇತ್ರಗಳನ್ನು ಗೆದ್ದುಕೊಂಡಿತ್ತು. ಈ ಹಿಂದಿನ ಚುನಾವಣೆಯ ಫಲಿತಾಂಶವನ್ನೂ ಕ್ಷೇತ್ರ ಹಂಚಿಕೆ ಚರ್ಚೆಯಲ್ಲಿ ಎಸ್‌ಪಿ ಪರಿಗಣಿಸುತ್ತಿದೆ.

ಇನ್ನೊಂದೆಡೆ, ಕಾಂಗ್ರೆಸ್ ರಾಜ್ಯ ಘಟಕವು ಆಂತರಿಕ ಸಮೀಕ್ಷೆ ಹಾಗೂ ಕ್ಷೇತ್ರಮಟ್ಟದ ವರದಿಗಳ ಆಧಾರದಲ್ಲಿ 181 ಕ್ಷೇತ್ರಗಳ ಪಟ್ಟಿಯನ್ನು ಸಿದ್ಧಪಡಿಸಿದೆ ಎಂದು ವರದಿಯಾಗಿದೆ. ಈ ಕ್ಷೇತ್ರಗಳಲ್ಲಿ ಪಕ್ಷಕ್ಕೆ ಉತ್ತಮ ಅವಕಾಶವಿದೆ ಎಂಬುದು ಕಾಂಗ್ರೆಸ್ ನಾಯಕರ ವಾದವಾಗಿದೆ.

ನವೆಂಬರ್ 17ರಿಂದ ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷದ ನಡುವೆ ಕ್ಷೇತ್ರ ಹಂಚಿಕೆ ಮಾತುಕತೆ ಆರಂಭವಾಗುವ ನಿರೀಕ್ಷೆಯಿದೆ. 2027ರ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಒಗ್ಗಟ್ಟಿನಿಂದ ಹೋರಾಡುವುದಾಗಿ ಅಖಿಲೇಶ್ ಯಾದವ್ ಹೇಳಿದ್ದರೂ, ಕ್ಷೇತ್ರಗಳ ಹಂಚಿಕೆ ವಿಚಾರದಲ್ಲಿ ಎರಡೂ ಪಕ್ಷಗಳ ನಡುವೆ ಒಮ್ಮತ ಮೂಡಬೇಕಿದೆ.

ಪುಣೆಯಲ್ಲಿ ಇಂಡಿಗೋ ವಿಮಾನದ ತುರ್ತು ಭೂಸ್ಪರ್ಶ

ಲ್ಯಾಂಡಿಂಗ್ ಗೇರ್‌ನಲ್ಲಿ ತಾಂತ್ರಿಕ ದೋಷ; 192 ಮಂದಿ ಸುರಕ್ಷಿತ



ಪುಣೆ,ನ.15: ಟೇಕ್‌ಆಫ್ ಆದ ಕೆಲವೇ ಕ್ಷಣಗಳಲ್ಲಿ ಲ್ಯಾಂಡಿಂಗ್ ಗೇರ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ಹಿನ್ನೆಲೆಯಲ್ಲಿ 192 ಮಂದಿ ಪ್ರಯಾಣಿಕರು ಮತ್ತು ಸಿಬ್ಬಂದಿ ಇದ್ದ ಇಂಡಿಗೋ ವಿಮಾನವೊಂದು ಪುಣೆ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದೆ. ಭಾನುವಾರ ಬೆಳಗ್ಗೆ ನಡೆದ ಈ ಘಟನೆಯಲ್ಲಿ ವಿಮಾನದಲ್ಲಿದ್ದ ಎಲ್ಲರೂ ಸುರಕ್ಷಿತವಾಗಿದ್ದು, ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಪುಣೆಯಿಂದ ಗುವಾಹಟಿಗೆ ತೆರಳುತ್ತಿದ್ದ ಇಂಡಿಗೋ ಸಂಸ್ಥೆಯ 6E 0623 ವಿಮಾನ ಟೇಕ್‌ಆಫ್ ಆದ ಬಳಿಕ ಅದರ ಲ್ಯಾಂಡಿಂಗ್ ಗೇರ್ ಒಳಗೆ ಮಡಚಿಕೊಳ್ಳದೆ ಹೊರಗಡೆಯೇ ಉಳಿದಿತ್ತು. ಇದನ್ನು ಗಮನಿಸಿದ ಪೈಲಟ್ ತಕ್ಷಣವೇ ವಾಯು ಸಂಚಾರ ನಿಯಂತ್ರಣ ಕೇಂದ್ರಕ್ಕೆ ಮಾಹಿತಿ ನೀಡಿದ್ದಾರೆ. ವಿಮಾನದಲ್ಲಿ ಪ್ರಯಾಣಿಕರು ಹಾಗೂ ಸಿಬ್ಬಂದಿ ಸೇರಿದಂತೆ ಒಟ್ಟು 192 ಮಂದಿ ಇದ್ದರು.

ಮಾಹಿತಿ ಲಭಿಸುತ್ತಿದ್ದಂತೆ ಪುಣೆ ವಿಮಾನ ನಿಲ್ದಾಣದ ಅಧಿಕಾರಿಗಳು, ಇಂಡಿಗೋ ಸಂಸ್ಥೆ ಮತ್ತು ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿದರು. ಮುನ್ನೆಚ್ಚರಿಕಾ ಕ್ರಮವಾಗಿ ಭಾರತೀಯ ವಾಯುಪಡೆ ವಿಮಾನ ನಿಲ್ದಾಣದಲ್ಲಿ ಪೂರ್ಣ ತುರ್ತು ಪರಿಸ್ಥಿತಿ ಘೋಷಿಸಿತು. ಅಗ್ನಿಶಾಮಕ ವಾಹನಗಳು, ಆಂಬ್ಯುಲೆನ್ಸ್‌ಗಳು ಹಾಗೂ ತುರ್ತು ರಕ್ಷಣಾ ತಂಡ ಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಯಿತು.

ವಿಮಾನವನ್ನು ಸುರಕ್ಷಿತವಾಗಿ ಇಳಿಸುವ ಉದ್ದೇಶದಿಂದ ರನ್ವೇ ಮೇಲ್ಭಾಗದಲ್ಲಿ ಕಡಿಮೆ ಎತ್ತರದಲ್ಲಿ ಹಾರಾಟ ನಡೆಸಲಾಯಿತು. ಈ ವೇಳೆ ವಿಮಾನದ ಲ್ಯಾಂಡಿಂಗ್ ಗೇರ್ನ ಸ್ಥಿತಿಯನ್ನು ನೆಲದಲ್ಲಿದ್ದ ಅಧಿಕಾರಿಗಳು ದೃಶ್ಯಾತ್ಮಕವಾಗಿ ಪರಿಶೀಲಿಸಿದರು. ಬಳಿಕ ಪೈಲಟ್ ವಿಮಾನವನ್ನು ಬೆಳಗ್ಗೆ 9.04ರ ಸುಮಾರಿಗೆ ಪುಣೆ ವಿಮಾನ ನಿಲ್ದಾಣದಲ್ಲಿ ಸುರಕ್ಷಿತವಾಗಿ ಇಳಿಸುವಲ್ಲಿ ಯಶಸ್ವಿಯಾದರು.

ಭೂಸ್ಪರ್ಶದ ಬಳಿಕ ವಿಮಾನವನ್ನು ಮೂರು ಅಗ್ನಿಶಾಮಕ ವಾಹನಗಳು ಮತ್ತು ಎರಡು ಆಂಬ್ಯುಲೆನ್ಸ್‌ಗಳ ಭದ್ರತೆಯಲ್ಲಿ ಏಪ್ರನ್‌ಗೆ ಬೇಗೆ ಕರೆದೊಯ್ಯಲಾಯಿತು. ವಿಮಾನದ ಸ್ಥಿತಿ ಸುರಕ್ಷಿತವಾಗಿದೆ ಎಂದು ಖಚಿತಪಡಿಸಿಕೊಂಡ ಬಳಿಕ ಬೆಳಗ್ಗೆ 9.10ಕ್ಕೆ ಎಟಿಸಿ ತುರ್ತು ಪರಿಸ್ಥಿತಿಯನ್ನು ಹಿಂಪಡೆಯಿತು. ನಂತರ ಏರೋಬ್ರಿಡ್ಜ್ ಸಂಪರ್ಕ ಕಲ್ಪಿಸಿ ಪ್ರಯಾಣಿಕರು ಹಾಗೂ ಸಿಬ್ಬಂದಿಯನ್ನು ಸುರಕ್ಷಿತವಾಗಿ ಕೆಳಗಿಳಿಸಲಾಯಿತು. ಘಟನೆಯಲ್ಲಿ ಯಾರಿಗೂ ಗಾಯಗಳಾಗಿಲ್ಲ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ. ಇನ್ನು ಪ್ರಯಾಣಿಕರ ಮುಂದಿನ ಪ್ರಯಾಣಕ್ಕೆ ಅನುಕೂಲವಾಗುವಂತೆ ಬೆಂಗಳೂರಿನಿಂದ ಪರ್ಯಾಯ ವಿಮಾನವನ್ನು ಪುಣೆಗೆ ತರಲು ಇಂಡಿಗೋ ಸಂಸ್ಥೆ ವ್ಯವಸ್ಥೆ ಮಾಡಿದೆ. ತಾಂತ್ರಿಕ ದೋಷ ಕಾಣಿಸಿಕೊಂಡ ವಿಮಾನವನ್ನು ಪರಿಶೀಲನೆ ಮತ್ತು ನಿರ್ವಹಣಾ ಕಾರ್ಯಕ್ಕೆ ಒಳಪಡಿಸಲಾಗಿದ್ದು, ಅಗತ್ಯ ಅನುಮತಿ ದೊರೆತ ಬಳಿಕವೇ ಮತ್ತೆ ಕಾರ್ಯಾಚರಣೆಗೆ ಬಳಸಲಾಗುತ್ತದೆ ಎಂದು ಸಂಸ್ಥೆ ತಿಳಿಸಿದೆ.

ರಾಷ್ಟ್ರೀಯ ಶಿಕ್ಷಣ ದಿನಾಚರಣೆ: ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಗಳಿಗೆ ರಾಜ್ಯ ಸರ್ಕಾರದಿಂದ ಗೌರವ



ಮುಂಬಯಿ, ನ.15: ಕರ್ನಾಟಕ ಸರ್ಕಾರದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಲಾದ ರಾಷ್ಟ್ರೀಯ ಶಿಕ್ಷಣ ದಿನಾಚರಣೆ ಹಾಗೂ ಸನ್ಮಾನ ಸಮಾರಂಭದಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಸಾಧನೆ ಮತ್ತು ಸಮಾಜಮುಖಿ ಸೇವೆಯನ್ನು ಗುರುತಿಸಿ ಗೌರವಿಸಲಾಯಿತು.

ಭಾರತದ ಪ್ರಥಮ ಕೇಂದ್ರ ಶಿಕ್ಷಣ ಸಚಿವ ಮೌಲಾನಾ ಅಬುಲ್ ಕಲಾಂ ಆಜಾದ್ ಜನ್ಮದಿನದ ಸ್ಮರಣಾರ್ಥ ಆಯೋಜಿಸಲಾದ ಈ ಸಮಾರಂಭದಲ್ಲಿ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಗಳ ಉಪಾಧ್ಯಕ್ಷರಾದ ಡಿ. ಸುರೇಂದ್ರ ಕುಮಾರ್ ಅವರು ಸಂಸ್ಥೆಯ ಪರವಾಗಿ ಗೌರವವನ್ನು ಸ್ವೀಕರಿಸಿದರು.

ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರಾದ ಯು.ಟಿ.ಖಾದರ್ ಡಿ.ಸುರೇಂದ್ರ ಕುಮಾರ್ ಅವರನ್ನು ಸನ್ಮಾನಿಸಿ ಗೌರವಿಸಿದರು.

ಶಿಕ್ಷಣ ಕ್ಷೇತ್ರದಲ್ಲಿ ಶೈಕ್ಷಣಿಕ ಶ್ರೇಷ್ಠತೆ, ಗುಣಮಟ್ಟದ ಶಿಕ್ಷಣದ ಲಭ್ಯತೆ, ಸಮಾನ ಅವಕಾಶಗಳ ಕಲ್ಪನೆ ಹಾಗೂ ಸಾಮಾಜಿಕ ಸಬಲೀಕರಣಕ್ಕೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಗಳು ನೀಡುತ್ತಿರುವ ಗಣನೀಯ ಕೊಡುಗೆಯನ್ನು ಪರಿಗಣಿಸಿ ಈ ಗೌರವ ನೀಡಲಾಯಿತು.

ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಗಳು ಶಿಕ್ಷಣದ ಜೊತೆಗೆ ಆರೋಗ್ಯ ಸೇವೆ ಹಾಗೂ ಸಮಾಜಮುಖಿ ಚಟುವಟಿಕೆಗಳ ಮೂಲಕ ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿವೆ.

ರಾಷ್ಟ್ರೀಯ ಶಿಕ್ಷಣ ದಿನಾಚರಣೆಯ ಸಂದರ್ಭದಲ್ಲಿ ರಾಜ್ಯ ಸರ್ಕಾರದಿಂದ ದೊರೆತ ಈ ಗೌರವವು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಸೇವೆ ಹಾಗೂ ಸಾಮಾಜಿಕ ಬದ್ಧತೆಗೆ ಸಂದ ಮತ್ತೊಂದು ಮಹತ್ವದ ಮನ್ನಣೆಯಾಗಿದೆ.

ದೆಹಲಿಯಲ್ಲಿ ಜೋಡಿಹತ್ಯೆ: ಸಹೋದರನ ಹತ್ಯೆಗೆ ಪ್ರತೀಕಾರವಾಗಿ ಹಂತಕನನ್ನೇ ಕೊಂದ ಸಹೋದರ

ನವದೆಹಲಿ,ನ.15: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕ್ಷುಲ್ಲಕ ಜಗಳವೊಂದು ಎರಡು ಕೊಲೆಗಳಿಗೆ ಕಾರಣವಾಗಿರುವ ಘಟನೆ ನಡೆದಿದೆ. ದೆಹಲಿಯ ಬವಾನಾ ಪ್ರದೇಶದ ಪೂತ್ ಖುರ್ದ್ ಗ್ರಾಮದಲ್ಲಿ ನಡೆದ ಈ ಘಟನೆ ಸ್ಥಳೀಯರಲ್ಲಿ ಆತಂಕ ಮೂಡಿಸಿದೆ. 27 ವರ್ಷದ ಯುವಕನನ್ನು ಗುಂಡಿಕ್ಕಿ ಹತ್ಯೆ ಮಾಡಿದ ಆರೋಪಿಯನ್ನೇ, ಮೃತನ ಸಹೋದರ ಪ್ರತೀಕಾರವಾಗಿ ಹತ್ಯೆ ಮಾಡಿದ್ದಾನೆ.

ಸಚಿನ್ ಎಂಬ ಯುವಕ ಹಾಗೂ ಸೋನು ಅಲಿಯಾಸ್ ಪ್ರದೀಪ್ ನಡುವೆ ಯಾವುದೋ ವಿಚಾರಕ್ಕೆ ಜಗಳ ನಡೆದಿತ್ತು ಎನ್ನಲಾಗಿದೆ.

ಈ ವೇಳೆ ಜಗಳ ವಿಕೋಪಕ್ಕೆ ತಿರುಗಿದ್ದು, ಸೋನು ತನ್ನ ಬಳಿಯಿದ್ದ ಬಂದೂಕಿನಿಂದ ಸಚಿನ್‌ನ ಎದೆಗೆ ಗುಂಡು ಹಾರಿಸಿದ್ದಾನೆ. ಗುಂಡೇಟಿನಿಂದ ಗಂಭೀರವಾಗಿ ಗಾಯಗೊಂಡ ಸಚಿನ್ ಮೃತಪಟ್ಟಿದ್ದಾನೆ. ಸಹೋದರನ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಆಕ್ರೋಶಗೊಂಡ ನರೇಶ್, ಸೋನುವಿನ ಮೇಲೆ ಪ್ರತಿದಾಳಿ ನಡೆಸಿ ಆತನನ್ನು ಹತ್ಯೆ ಮಾಡಿದ್ದಾನೆ.

ಘಟನೆ ನಡೆದ ಸ್ಥಳದಿಂದ ಸುಮಾರು 100 ಮೀಟರ್ ದೂರದಲ್ಲಿ ಸೋನುವಿನ ಮೃತದೇಹ ಪತ್ತೆಯಾಗಿದೆ. ಸ್ಥಳದಲ್ಲಿ ರಕ್ತದ ಕಲೆಗಳು ಹಾಗೂ ಮೂರು ಖಾಲಿ ಗುಂಡುಗಳನ್ನೂ ಪೊಲೀಸರು ಪತ್ತೆ ಮಾಡಿದ್ದಾರೆ. ಮಾಹಿತಿ ತಿಳಿದ ತಕ್ಷಣ ಸ್ಥಳಕ್ಕೆ ಧಾವಿಸಿದ ಪೊಲೀಸರು ಪರಿಶೀಲನೆ ನಡೆಸಿ, ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಸ್ಥಳೀಯರನ್ನು ವಿಚಾರಣೆ ನಡೆಸಿದ್ದು, ಸುತ್ತಮುತ್ತಲಿನ ಪ್ರದೇಶಗಳ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದ್ದಾರೆ. ಸಚಿನ್ ಹತ್ಯೆಗೆ ಪ್ರತೀಕಾರವಾಗಿ ಸೋನುವನ್ನು ಕೊಂದ ಆರೋಪದ ಮೇಲೆ ನರೇಶ್‌ನನ್ನು ಬಂಧಿಸಲಾಗಿದೆ.

ಕ್ಷುಲ್ಲಕ ಜಗಳದಿಂದ ಆರಂಭವಾದ ಘಟನೆ ಎರಡು ಜೀವಗಳನ್ನು ಬಲಿ ಪಡೆದಿದ್ದು, ಎರಡೂ ಕೊಲೆಗಳ ಹಿಂದಿನ ನಿಖರ ಕಾರಣ ಹಾಗೂ ಘಟನೆ ನಡೆದ ಸನ್ನಿವೇಶಗಳ ಕುರಿತು ದೆಹಲಿ ಪೊಲೀಸರು ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ.

ಪೇಟಿಎಂ ವ್ಯಾಲೆಟ್‌ಗೆ ಆರ್‌ಬಿಐ ಗ್ರೀನ್ ಸಿಗ್ನಲ್

ಫಿನ್‌ಟೆಕ್ ದಿಗ್ಗಜ ಒನ್ 97 ಕಮ್ಯುನಿಕೇಷನ್ಸ್ ಲಿಮಿಟೆಡ್‌ನಸಂಪೂರ್ಣ ಸ್ವಾಮ್

319 KAS ಹುದ್ದೆಗಳಿಗೆ ಪೂರ್ವಭಾವಿ ಪರೀಕ್ಷೆ

ಬಿಗಿ ಭದ್ರತೆ, ಕಟ್ಟುನಿಟ್ಟಿನ ಕ್ರಮಗಳೊಂದಿಗೆ ಕೆಎಎಸ್ ಪೂರ್ವಭಾವಿ ಪರೀಕ್ಷೆ ಯಶಸ್ವಿ



ಬೆಂಗಳೂರು,ನ.15– ಸದಾ ಒಂದಿಲ್ಲೊಂದು ವಿವಾದಕ್ಕೆ ಒಳಗಾಗುತ್ತಾ ಬಂದಿರುವ ಕರ್ನಾಟಕ ಲೋಕಸೇವಾ ಆಯೋಗವು 2026–27ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ (ಕೆಎಎಸ್) ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ 319 ಹುದ್ದೆಗಳಿಗೆ ರಾಜ್ಯದ 15 ಜಿಲ್ಲೆಗಳಲ್ಲಿ 345 ಪರೀಕ್ಷಾ ಕೇಂದ್ರಗಳಲ್ಲಿ ಬಿಗಿ ಭದ್ರತೆಯೊಂದಿಗೆ ಪೂರ್ವಭಾವಿ ಪರೀಕ್ಷೆ ನಡೆಸಲಾಯಿತು. ಬೆಳಗಿನ ಅವಧಿಯಲ್ಲಿ 60% ಹಾಜರಾಗಿದ್ದರೆ, ಮಧ್ಯಾಹ್ನದ ಪರೀಕ್ಷೆಯಲ್ಲಿ ಶೇ 59ರಷ್ಟು ಅಭ್ಯರ್ಥಿಗಳು ಭಾಗವಹಿಸಿದ್ದರು.

ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಲು ತೀವ್ರ ಕಟ್ಟೆಚ್ಚರ ವಹಿಸಲಾಗಿದೆ. ಕೆಲವೊಂದು ಸಣ್ಣ–ಪುಟ್ಟ ತೊಂದರೆಗಳನ್ನು ಹೊರತುಪಡಿಸಿದರೆ, ಬಹುತೇಕ ಸುಸೂತ್ರವಾಗಿ ಪರೀಕ್ಷೆ ನಡೆಸಲಾಗುತ್ತಿದೆ. ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ಇ.ಡಿ. ಈಗಾಗಲೇ ಚಾರ್ಜ್‌ಶೀಟ್ ಸಲ್ಲಿಸಿದೆ, ಮತ್ತೊಂದೆಡೆ ಎಸ್‌ಐಟಿ ತನಿಖೆ ನಡೆಸುತ್ತಿದೆ. ಈ ನಡುವೆ ಕೆಪಿಎಸ್ಸಿ ಕೆಎಎಸ್ ಪೂರ್ವಭಾವಿ ಪರೀಕ್ಷೆ ನಡೆಸಿದೆ. ಇಂದು ನಡೆದ ಪೂರ್ವಭಾವಿ ಪರೀಕ್ಷೆಗೆ ಒಟ್ಟು, 1,47,067 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಬೆಳಿಗ್ಗೆ 10ರಿಂದ ಮಧ್ಯಾಹ್ನ 12ರವರೆಗೆ ಒಂದು ಪರೀಕ್ಷೆ–1 ನಡೆದಿದ್ದು, ಮಧ್ಯಾಹ್ನ 2ರಿಂದ 4ರವರೆಗೆ ಪರೀಕ್ಷೆ–2 ನಡೆಯಲಿದೆ. ಗ್ರೂಪ್ ಎ ಯ 117 ಮತ್ತು ಗ್ರೂಪ್ ಬಿ ಯ 202 ಹುದ್ದೆಗಳಿಗೆ ನೇಮಕಾತಿ ಪರೀಕ್ಷೆ ನಡೆಸಲಾಗುತ್ತಿದೆ. ಬೆಂಗಳೂರು ನಗರ, ತುಮಕೂರು, ಮೈಸೂರು, ಕಲಬುರಗಿ, ರಾಯಚೂರು, ಬಳ್ಳಾರಿ, ಬಾಗಲಕೋಟೆ, ವಿಜಯಪುರ, ಧಾರವಾಡ, ಬೆಳಗಾವಿ, ಉತ್ತರ ಕನ್ನಡ, ಶಿವಮೊಗ್ಗ, ದಕ್ಷಿಣ ಕನ್ನಡ, ಹಾಸನ, ದಾವಣಗೆರೆ ಜಿಲ್ಲೆಗಳಲ್ಲಿ ಸ್ಥಾಪಿಸಿರುವ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯುತ್ತಿದೆ.

ಪರೀಕ್ಷೆಯಲ್ಲಿ ಐದು ಆಯ್ಕೆಗಳ ಒಎಂಆರ್ ಪದ್ಧತಿ ಇದ್ದು, ತ್ರಿಪ್ರತಿ ಉತ್ತರ ಪತ್ರಿಕೆ ವ್ಯವಸ್ಥೆ ಮಾಡಲಾಗಿದೆ. ಪರೀಕ್ಷೆ ನಡೆದ ದಿನವೇ ಸ್ಕ್ಯಾನ್ ಮಾಡಿದ ಒಎಂಆರ್ ಪ್ರತಿಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ವ್ಯವಸ್ಥೆ ಜಾರಿಗೊಳಿಸಲು ಆಯೋಗ ಸಿದ್ಧತೆ ಮಾಡಿಕೊಂಡಿದೆ. ಒಂದು ಪ್ರತಿ ಅಭ್ಯರ್ಥಿಗೆ, ಇನ್ನೊಂದು ಕೆಪಿಎಸ್ಸಿ ಮೌಲ್ಯಮಾಪನಕ್ಕೆ ಮತ್ತೊಂದು ಜಿಲ್ಲಾಧಿಕಾರಿ/ಕೆಪಿಎಸ್ಸಿ ಸ್ಟ್ರಾಂಗ್ ರೂಮ್ನಲ್ಲಿ ಸುರಕ್ಷಿತವಾಗಿಡಲಾಗುತ್ತದೆ. ಇದೇ ಮೊದಲ ಬಾರಿಗೆ ಪ್ರತಿ ಪರೀಕ್ಷಾ ಕೊಠಡಿಯಲ್ಲಿ ಇಬ್ಬರು ಮೇಲ್ವಿಚಾರಕರ ನಿಯೋಜಿಸಲಾಗಿದ್ದು, ನಕಲಿ ಅಭ್ಯರ್ಥಿಗಳ ಭಾಗವಹಿಸುವಿಕೆ ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಅಕ್ರಮಕ್ಕೆ ಆಸ್ಪದ ನೀಡುವ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಎಚ್ಚರಿಕೆ ಸಂದೇಶ ನೀಡಿದ್ದು, ಪರೀಕ್ಷಾ ಅಕ್ರಮಗಳಲ್ಲಿ ತೊಡಗುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಲಾಗಿದೆ. ಎಲ್ಲಾ ಪರೀಕ್ಷಾ ಕೊಠಡಿಗಳಲ್ಲಿ ಸಿಸಿ ಟಿವಿ ಕ್ಯಾಮೆರಾ ಮತ್ತು ಮೊಬೈಲ್ ಜಾಮರ್‌ಗಳನ್ನು ಅಳವಡಿಸಲಾಗಿದೆ.

ವಸ್ತ್ರ ಸಂಹಿತೆ: ಅಭ್ಯರ್ಥಿಗಳು ಸರಳ ಉಡುಪು ಧರಿಸಿ ಪರೀಕ್ಷೆಗೆ ಹಾಜರಾಗಬೇಕು. ತುಂಬು ತೋಳಿನ ಶರ್ಟ್, ಟಿ–ಶರ್ಟ್, ಫ್ರಿಲ್ ಹಾಗೂ ಪದರಗಳಿರುವ ವಿನ್ಯಾಸದ ಉಡುಪುಗಳ ನಿಷೇಧವಿದ್ದು, ಮಂಗಳಸೂತ್ರ ಮತ್ತು ಕಾಲುಂಗುರ ಹೊರತುಪಡಿಸಿ ಲೋಹ ಅಥವಾ ಲೋಹವಲ್ಲದ ಯಾವುದೇ ಆಭರಣ ಧರಿಸಲು ಅವಕಾಶವಿಲ್ಲ. ಶೂ ಮತ್ತು ಸಾಕ್ಸ್ ಬದಲಿಗೆ ಸರಳ ಚಪ್ಪಲಿ ಧರಿಸಿ ಬರಬೇಕು. ಧಾರ್ಮಿಕ ಆಚರಣೆಗೆ ಸಂಬಂಧಿಸಿದ ವಸ್ತುಗಳನ್ನು ಧರಿಸುವವರು ಹಾಗೂ ಶ್ರವಣ ಸಾಧನ ಬಳಸುವವರು ಪರೀಕ್ಷೆ ಆರಂಭವಾಗುವುದಕ್ಕಿಂತ ಎರಡು ಗಂಟೆ ಮುಂಚಿತವಾಗಿ ವಿಶೇಷ ತಪಾಸಣೆಗೆ ಒಳಪಡಬೇಕಾಗಿತ್ತು. ಶ್ರವಣ ಸಾಧನ ಬಳಸುವವರು ವೈದ್ಯಕೀಯ ದಾಖಲೆಗಳ ಪ್ರದರ್ಶನ ಕಡ್ಡಾಯಗೊಳಿಸಲಾಗಿತ್ತು.

ಎಲ್ಲ ಅಭ್ಯರ್ಥಿಗಳು ಕೈಯಲ್ಲಿ ಹಿಡಿಯುವ ಲೋಹಶೋಧಕ ಸಾಧನದ ತಪಾಸಣೆಗೆ ಒಳಪಡುವುದು ಕಡ್ಡಾಯ. ಗುರುತು ಪತ್ತೆಗೆ ಅಡ್ಡಿಯಾಗುವ ರೀತಿಯ ವಸ್ತ್ರ ಧರಿಸಿರುವವರು ತಪಾಸಣಾ ಸಿಬ್ಬಂದಿ ಹಾಗೂ ಕೊಠಡಿ ಸಂವೀಕ್ಷಕರಿಗೆ ಸಹಕರಿಸಬೇಕು, ತಪಾಸಣೆ ನಿರಾಕರಿಸಿದರೆ ಪರೀಕ್ಷೆಗೆ ಅವಕಾಶವಿಲ್ಲ. ಪರೀಕ್ಷೆ ವೇಳೆ ಶೌಚಾಲಯಕ್ಕೆ ಹೋಗಿ ಬಂದರೂ ಮರು ತಪಾಸಣೆ ಬಳಿಕವೇ ಕೊಠಡಿಗೆ ಪ್ರವೇಶ.

ಲೋಹದ ಅಥವಾ ಪಾರದರ್ಶಕ ವಲ್ಲದ ನೀರಿನ ಬಾಟಲಿಗಳನ್ನು ಪರೀಕ್ಷಾ ಕೊಠಡಿಗೆ ತರಲು ಅವಕಾಶ ವಿಲ್ಲ. ಕಿವಿ ಮತ್ತು ಬಾಯಿಯನ್ನು ಮುಚ್ಚುವ ಅಥವಾ ಯಾವುದೇ ರೀತಿಯ ಫಿಲ್ಟರ್ ಹೊಂದಿರುವ ಫೇಸ್ ಮಾಸ್ಕ್ ಧರಿಸಿ ಪ್ರವೇಶ ನಿಷೇಧ ವಿಧಿಸಲಾಗಿತ್ತು. ಅಲ್ಲದೆ, ಮೊಬೈಲ್, ಟ್ಯಾಬ್ಲೆಟ್, ಪೆನ್ಡ್ರೈವ್, ಬ್ಲೂಟೂತ್ ಸಾಧನ, ಸ್ಮಾರ್ಟ್‌ವಾಚ್, ಕ್ಯಾಲ್ಕುಲೇಟರ್ ಸೇರಿದಂತೆ ಎಲೆಕ್ಟ್ರಾನಿಕ್ ಉಪಕರಣಗಳು ಹಾಗೂ ಪುಸ್ತಕ, ಚೀಟಿ, ನೋಟಿಸ್‌ಗೆ ಅವಕಾಶವಿರಲಿಲ್ಲ.

ಕೆಪಿಎಸ್‌ಸಿ ಸುಧಾರಣೆಗೆ ಐತಿಹಾಸಿಕ ಹೆಜ್ಜೆ: ಡಿ.ಕೆ.ಶಿವಕುಮಾರ್



ಕರ್ನಾಟಕ ಲೋಕಸೇವಾ ಆಯೋಗದ ಪರೀಕ್ಷಾ ವ್ಯವಸ್ಥೆಯಲ್ಲಿ ಐತಿಹಾಸಿಕ ಸುಧಾರಣೆ ತರಲು ರಾಜ್ಯ ಸರ್ಕಾರ ಮಹತ್ವದ ಹೆಜ್ಜೆ ಇಟ್ಟಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳಿಗೆ ನಡೆದ ಪೂರ್ವಭಾವಿ ಪರೀಕ್ಷೆ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಸುಳ್ಳು ವದಂತಿಗಳಿಗೆ ಕಿವಿಗೊಡದಿರಿ. ನೇಮಕಾತಿ ಪರೀಕ್ಷೆಯಲ್ಲಿ ಪಾರದರ್ಶಕತೆಗೆ ಒತ್ತು ನೀಡುವ ಮೂಲಕ ಯುವಜನರ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಲು ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದ್ದಾರೆ.



ಇತ್ತೀಚಿನ ಆತ್ಮಹತ್ಯೆಗಳಿಗೆ ಪ್ರಚೋದನೆ ನೀಡಿದ ಆರೋಪವಿರುವ ಸರ್ಕಾರಿ ಅಧಿಕಾರಿಗಳು ಹಾಗೂ ಇತರ ವ್ಯಕ್ತಿಗಳಿಗೆ ಕಠಿಣ ಕಾನೂನು ಶಿಕ್ಷೆ ವಿಧಿಸಬೇಕೆಂದು ಆಗ್ರಹಿಸಿ, ಭಾನುವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬಿಲ್ಲವ ಯುವ ಬ್ರಿಗೇಡ್ ಸದಸ್ಯರು ಧರಣಿ ನಡೆಸಿದರು.

ಐಸಿಎಫ್ಎಐ ಬಿಸಿನೆಸ್ ಸ್ಕೂಲ್‌ನ ಮೂರನೇ ಘಟಿಕೋತ್ಸವ: 555 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ



ಬೆಂಗಳೂರು, ನ.15: ಐಸಿಎಫ್ಎಐ ಫೌಂಡೇಶನ್ ಫಾರ್ ಹೈಯರ್ ಎಜುಕೇಶನ್‌ನ (ಐಎಫ್ಎಚ್ಇ) ಆಫ್–ಕ್ಯಾಂಪಸ್ ಕೇಂದ್ರವಾದ ಐಸಿಎಫ್ಎಐ ಬಿಸಿನೆಸ್ ಸ್ಕೂಲ್ (ಐಬಿಎಸ್) ಬೆಂಗಳೂರಿನ ಮೂರನೇ ಘಟಿಕೋತ್ಸವ ಕೆಂಗೇರಿಯಲ್ಲಿರುವ ಕ್ಯಾಂಪಸ್‌ನಲ್ಲಿ ನಡೆಯಿತು.

ಘಟಿಕೋತ್ಸವದಲ್ಲಿ 555 ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು. ಈ ಪೈಕಿ 519 ಮಂದಿ ಮಾಸ್ಟರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಶನ್ (ಎಂಬಿಎ) ಮತ್ತು 36 ಮಂದಿ ಬ್ಯಾಚುಲರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಶನ್ (ಬಿಬಿಎ) ಕಾರ್ಯಕ್ರಮದಲ್ಲಿ ಪದವಿ ಪ್ರದಾನ ಮಾಡಲಾಯಿತು.

ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿ ಗಳಿಗೆ ಪ್ರಶಸ್ತಿ, ಪದಕ ಮತ್ತು ಬಹುಮಾನ ನೀಡಿ ಗೌರವಿಸಲಾಯಿತು.

ಎಂಬಿಎ ಪದವೀಧರರ ಪೈಕಿ ಪ್ರಥಮ ರ್ಯಾಂಕ್ ಪಡೆದ ಕೃತಿ ಸಿ.ಬಿ. ಅವರಿಗೆ ಶೈಕ್ಷಣಿಕ ಶ್ರೇಷ್ಠತೆಗಾಗಿ ಚಿನ್ನದ ಪದಕದ ಜೊತೆಗೆ 30,000 ನಗದು ಬಹುಮಾನ ನೀಡಲಾಯಿತು. ದ್ವಿತೀಯ ರ್ಯಾಂಕ್ ಪಡೆದ ಬಿಂಗಿ ಸುಧಾಶ್ರೀ ಅವರಿಗೆ ಬೆಳ್ಳಿಯ ಪದಕ ಮತ್ತು ರೂ.20,000 ನಗದು ಬಹುಮಾನ ಲಭಿಸಿತು.

ಬಿಬಿಎ ಕಾರ್ಯಕ್ರಮದಲ್ಲಿ ಪ್ರಥಮ ರ್ಯಾಂಕ್ ಗಳಿಸಿದ ಸೆಫಾಲಿ ಪ್ರಮೋದ್ ಪಾತ್ರೋ ಅವರಿಗೆ ಶೈಕ್ಷಣಿಕ ಶ್ರೇಷ್ಠತೆಗಾಗಿ ಚಿನ್ನದ ಪದಕದ ಜೊತೆಗೆ ರೂ.30,000 ನಗದು ಬಹುಮಾನ, ದ್ವಿತೀಯ ರ್ಯಾಂಕ್ ಪಡೆದ ಟಿ.ಬಿ.ಎಸ್. ನಿತರ್ಶಿನಿ ಅವರಿಗೆ ಬೆಳ್ಳಿಯ ಪದಕ ಮತ್ತು 20,000 ನಗದು ಬಹುಮಾನ ಪ್ರದಾನ ಮಾಡಲಾಯಿತು.


ತೆಲಂಗಾಣ ಲೋಕಸೇವಾ ಆಯೋಗದ ಸದಸ್ಯ, ಕೇಂದ್ರ ಸರ್ಕಾರದ ಬೆಲೆಗಳು ಮತ್ತು ಜೀವನ ವೆಚ್ಚ ಕುರಿತ ತಾಂತ್ರಿಕ ಸಲಹಾ ಸಮಿತಿಯ ಸದಸ್ಯ ಡಾ. ಅಮೀರ್ ಉಲ್ಲಾಖಾನ್ ಮಾತನಾಡಿ, ಯಶಸ್ಸು ವಿನಯದಿಂದ ಬರುತ್ತದೆ, ಅಹಂಕಾರದಿಂದ ಪತನವಾಗುತ್ತದೆ. ವಿನಮ್ರರಾಗಿರಿ, ಕಲಿಯುವ ಹಸಿವು ಉಳಿಸಿಕೊಳ್ಳಿ. ಸದಾ ಹಸಿವುಳ್ಳವರಾಗಿರಿ. ಒಂದು ಸಂಸ್ಥೆಯ ಯಶಸ್ಸಿಗೆ ಆ ಸಂಸ್ಥೆಯನ್ನು ಕಟ್ಟಬಲ್ಲ ನಿರ್ಮಾತೃಗಳ ಅಗತ್ಯವಿದೆ ಎಂಬುದನ್ನು ಅವರು ಒತ್ತಿ ಹೇಳಿದರು.

ಅಖಿಲ ಭಾರತ ನಿರ್ವಹಣಾ ಸಂಘದ (ಎಐಎಂಎ) ಮ್ಯಾನೇಜ್‌ಮೆಂಟ್ ಎಜುಕೇಶನ್ ಕೇಂದ್ರದ ನಿರ್ದೇಶಕ ಡಾ. ರೋಹಿತ್ ಸಿಂಗ್ ಮಾತನಾಡಿ, ವಿದ್ಯಾರ್ಥಿಗಳು ಸಂದರ್ಭ ಬಂದಾಗ ಪ್ರಾಮಾಣಿಕತೆಯನ್ನೇ ಆಯ್ಕೆ ಮಾಡಿಕೊಳ್ಳಬೇಕು. ಬುದ್ಧಿವಂತಿಕೆಗಿಂತ ಪ್ರಾಮಾಣಿಕತೆ ಮುಖ್ಯ ಎಂದು ಪ್ರತಿಪಾದಿಸಿದರು. ಐಎಫ್ಎಚ್ಇ ಕುಲಪತಿ ಡಾ. ವಿನಯ್ ಕುಮಾರ್ ಘಟಿಕೋತ್ಸವ ವರದಿ ಮಂಡಿಸಿದರು. 2025–2026ನೇ ಸಾಲಿನಲ್ಲಿ ಸಂಸ್ಥೆ, ಬೋಧಕರು ಮತ್ತು ವಿದ್ಯಾರ್ಥಿಗಳು ಸಾಧಿಸಿದ ಮೈಲಿಗಲ್ಲುಗಳನ್ನು ಅನಾವರಣಗೊಳಿಸಿದರು.

ಬಳಿಕ ಮಾತನಾಡಿದ ಡಾ. ವಿನಯ್ ಕುಮಾರ್, 'ಐಸಿಎಫ್ಎಐ ಕೇಸ್ ರಿಸರ್ಚ್ ಸೆಂಟರ್' ಜಗದ್ವಿಖ್ಯಾತಿ ಪಡೆದಿದೆ. ಇಲ್ಲಿರುವ 7,300 ಪ್ರಕರಣ ಅಧ್ಯಯನಗಳ ಸಂಗ್ರಹವನ್ನು 90 ದೇಶಗಳ 1,300 ಸಂಸ್ಥೆಗಳು ವ್ಯಾಪಕವಾಗಿ ಬಳಸಿಕೊಳ್ಳುತ್ತಿವೆ ಎಂದು ಅವರು ತಿಳಿಸಿದರು.

ಸೋನಿಯಾ ಗಾಂಧಿ ಅವರ ಆತ್ಮಕಥೆ

'ಬಿಲಾಂಗಿಂಗ್': ಮಲ್ಲೇಶ್ವರ ಸರ್ಕಾರಿ ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣೆ



ಬೆಂಗಳೂರು, ನ.15– ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರ ಆತ್ಮಕಥೆ 'ಬಿಲಾಂಗಿಂಗ್ – ಎ ಜರ್ನಿ ಆಫ್ ಲವ್' ಪುಸ್ತಕವನ್ನು ಬೆಂಗಳೂರಿನ ಮಲ್ಲೇಶ್ವರ ಸರ್ಕಾರಿ ಕಾಲೇಜಿನ ಸ್ಕೌಟ್ಸ್, ಗೈಡ್ಸ್ ಹಾಗೂ ಎನ್ಸಿಸಿ ವಿದ್ಯಾರ್ಥಿಗಳಿಗೆ ಉಚಿತವಾಗಿ ವಿತರಿಸಲಾಗಿದೆ.

ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಅನೂಪ್ ಅಯ್ಯಂಗಾರ್ ನೇತೃತ್ವದಲ್ಲಿ 100ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ನೀಡಲಾಗಿದೆ.

ಸೋನಿಯಾ ಗಾಂಧಿ ಅವರ ಜೀವನ, ತ್ಯಾಗ ಮತ್ತು ಸ್ಫೂರ್ತಿಯ ಗುಣಗಳು ವಿದ್ಯಾರ್ಥಿಗಳಿಗೆ ಆದರ್ಶವಾಗಲಿ ಎಂಬ ಉದ್ದೇಶದಿಂದ ಈ ಪುಸ್ತಕಗಳನ್ನು ವಿತರಿಸಲಾಗಿದೆ.

ಈ ಕುರಿತು ಮಾತನಾಡಿದ ಅನೂಪ್ ಅಯ್ಯಂಗಾರ್, ಸಮರ್ಪಣೆ ಮತ್ತು ಬದ್ಧತೆಯಿಂದ ಕೆಲಸ ಮಾಡಿದರೆ ಯಶಸ್ಸು ಸಾಧಿಸಲು ಸಾಧ್ಯ ಎಂಬ ಸಂದೇಶವನ್ನು ವಿದ್ಯಾರ್ಥಿಗಳು ಪುಸ್ತಕದ ಮೂಲಕ ತಿಳಿದುಕೊಳ್ಳಬೇಕು ಎಂಬ ಆಶಯವಿದೆ ಎಂದು ಹೇಳಿದರು.

ಗುಣಮಟ್ಟದ ಈ ಪುಸ್ತಕವನ್ನು ಶಾಲಾ–ಕಾಲೇಜು ವಿದ್ಯಾರ್ಥಿಗಳು ಸ್ವಂತ ಹಣದಲ್ಲಿ ಖರೀದಿಸುವುದು ಕಷ್ಟವಾಗಬಹುದು.

ಹೀಗಾಗಿ ಎಲ್ಲರೂ ಪುಸ್ತಕ ಓದಬೇಕು ಎಂಬ ಉದ್ದೇಶ ದಿಂದ ತಮ್ಮ ಶಕ್ತಿಗೆ ಅನುಗುಣವಾಗಿ ಉಚಿತವಾಗಿ ವಿತರಣೆ ಮಾಡಲಾಗುತ್ತಿದೆ. ಮಲ್ಲೇಶ್ವರ ಸರ್ಕಾರಿ ಕಾಲೇಜಿನ ಎಲ್ಲ ವಿದ್ಯಾರ್ಥಿಗಳಿಗೂ ಪುಸ್ತಕ ನೀಡುವ ಯೋಜನೆ ಇದೆ ಎಂದು ತಿಳಿಸಿದರು.

ಬರ ನಿರ್ವಹಣೆ - ಆಧುನಿಕ ತಂತ್ರಜ್ಞಾನಕ್ಕೆ ಆದ್ಯತೆ

ಜಿಕೆವಿಕೆಯಲ್ಲಿ ಇಂದಿನಿಂದ ಮೂರು ದಿನಗಳ ಕಾಲ ಬೃಹತ್ ಕೃಷಿಮೇಳ



ಬೆಂಗಳೂರು, ನ.15: ಬರಗಾಲವನ್ನು ಸಮರ್ಥವಾಗಿ ಎದುರಿಸುವ ತಂತ್ರಜ್ಞಾನ ಹಾಗೂ ಆಧುನಿಕ ಕೃಷಿ ನಾವೀನ್ಯಗಳನ್ನು ರೈತರಿಗೆ ಪರಿಚಯಿಸುವ ನಿಟ್ಟಿನಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಜಿಕೆವಿಕೆ ಆವರಣದಲ್ಲಿ ನವೆಂಬರ್ 16, 17 ಮತ್ತು 18ರಂದು ಮೂರು ದಿನಗಳ ಬೃಹತ್ 'ಕೃಷಿ ಮೇಳ' ಆಯೋಜಿಸಿದೆ.

ಮೇಳಕ್ಕಾಗಿ ಬೆಳೆದಿರುವ ಅಲಂಕಾರಿಕ ಸೂರ್ಯಕಾಂತಿ, ಬರಸಹಿಷ್ಣುತೆ ಹೊಂದಿರುವ ಸಿರಿಧಾನ್ಯಗಳು, ಬಣ್ಣದ ಸೇವಂತಿಗೆ ಹೂವು ಇತ್ಯಾದಿ ಬೆಳೆಗಳನ್ನು ಶುಕ್ರವಾರ ವಿವಿ ಹಂಗಾಮಿ ಕುಲಪತಿ ಡಾ. ಪಿ. ವೆಂಕಟರವಣ ಸೇರಿದಂತೆ ವಿವಿ ಅಧಿಕಾರಿಗಳು ವೀಕ್ಷಣೆ ಮಾಡಿದರು.

ಈ ಬಾರಿಯ ಮೇಳವು ಸಂಪೂರ್ಣ ತಂತ್ರಜ್ಞಾನ ಆಧಾರಿತವಾಗಿದ್ದು, ಸುಮಾರು 100 ತಂತ್ರಜ್ಞಾನ ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಹವಾಮಾನ ವೈಪರಿತ್ಯಕ್ಕೆ ಅನುಗುಣವಾಗಿ ಬರ ನಿರ್ವಹಣಾ ತಂತ್ರಗಳು, ಬರ ನಿರೋಧಕ ಬೆಳೆ ತಳಿಗಳ ಪ್ರಾತ್ಯಕ್ಷಿಕೆಗಳನ್ನು ರೈತರಿಗಾಗಿ ಸಿದ್ಧಪಡಿಸಲಾಗಿದೆ.ಮೇಳದ ಪ್ರಮುಖ ಆಕರ್ಷಣೆಯಾಗಿ 10 ಎಕರೆ ಪ್ರದೇಶದಲ್ಲಿ75 ವೈವಿಧ್ಯಮಯ ಬೆಳೆ ಹಾಗೂ ತಳಿಗಳನ್ನು ಒಂದೇ ಸೂರಿನಡಿ ವೈಜ್ಞಾನಿಕವಾಗಿ ಬೆಳೆದು ಪ್ರದರ್ಶಿಸ ಲಾಗುತ್ತಿದೆ. ಇದರೊಂದಿಗೆ 'ಕೀಟ ವಿಸ್ಮಯ', 'ಮಧುವನ', 'ಔಷಧೀಯ ಕೃಷಿ ಪ್ರಾತ್ಯಕ್ಷಿಕೆ' ಹಾಗೂ 'ಸಮಗ್ರ ಇಳುವರಿ ಪ್ರಾತ್ಯಕ್ಷಿಕೆ'ಗಳು ರೈತರ ಗಮನಸೆಳೆಯಲಿವೆ. ರಾಜ್ಯದಲ್ಲಿ ಕಂಡು ಬಂದಿರುವ ಎಲ್ ನಿನೋ ಪರಿಣಾಮ, ಭವಿಷ್ಯದ ಸಿದ್ಧತೆ, ಹವಾಮಾನ ವೈಪರೀತ್ಯ ಚತುರ ಕೃಷಿ ಹಾಗೂ ಮಣ್ಣು–ನೀರು ಸಂರಕ್ಷಣೆ ಕುರಿತು ತಜ್ಞರು ವಿಚಾರ ಮಂಡಿಸಲಿದ್ದಾರೆ. ಅಲ್ಲದೆ, ರೈತರ ಕೃಷಿ ಸಂಬಂಧಿತ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಒದಗಿಸಲು 'ತಜ್ಞರ ಸಲಹಾ ಕೇಂದ್ರ'ವನ್ನೂ ತೆರೆಯಲಾಗುತ್ತಿದೆ ಎಂದು ಕೃಷಿ ವಿವಿ ಹಂಗಾಮಿ ಕುಲಪತಿ ಡಾ. ಪಿ. ವೆಂಕಟರವಣ ತಿಳಿಸಿದರು.ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ರಾಜ್ಯ, ಜಿಲ್ಲೆ ಹಾಗೂ ತಾಲೂಕು ಮಟ್ಟದ ಪ್ರಗತಿಪರ ರೈತ ಮತ್ತು ರೈತ ಮಹಿಳೆಯರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುವುದು. ಮೇಳದಲ್ಲಿ ವಿವಿ ಸಂಶೋಧನಾ ವಿಭಾಗಗಳು, ವಿವಿಧ ಕೃಷಿ ವಿಶ್ವವಿದ್ಯಾಲಯಗ

ಪ್ರವಾಸೋದ್ಯಮ ಅಭಿವೃದ್ಧಿಗೆ ಆದ್ಯತೆ

ವಿದೇಶಿ ಪ್ರವಾಸಿಗರನ್ನು ಆಕರ್ಷಿಸಲು ಅಗತ್ಯ ಕ್ರಮ: ಡಾ. ಎಂ.ಬಿ.ಪಾಟೀಲ

ವಿಜಯಪುರ,ನ.15 : ವಿಜಯಪುರದ ಕಲೆ, ವಾಸ್ತುಶಿಲ್ಪ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ವಿಶ್ವ ಮಟ್ಟದಲ್ಲಿ ಪರಿಚಯಿಸುವ ಉದ್ದೇಶದಿಂದ ರಾಜ್ಯಸಭಾ ಸದಸ್ಯೆ ಡಾ. ಸುಧಾಮೂರ್ತಿ ಪರಿಕಲ್ಪನೆಯಲ್ಲಿ ರೂಪುಗೊಂಡಿರುವ 'ಕಲಾಧಾರಾ' ಸಾಂಸ್ಕೃತಿಕ ಉತ್ಸವ ಎರಡನೇ ವರ್ಷವೂ ವೈಭವಯುತವಾಗಿ ಆರಂಭ ಗೊಂಡಿತು.

ಕಳೆದ ವರ್ಷ ಗೋಳಗುಮ್ಮಟದ ಆವರಣದಲ್ಲಿ ನಡೆದಿದ್ದ ಈ ಉತ್ಸವ ಈ ಬಾರಿ ಐತಿಹಾಸಿಕ ಇಬ್ರಾಹಿಂ ರೋಜಾ ಅಂಗಳದಲ್ಲಿ ನಡೆಯುತ್ತಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ. ಪಾಟೀಲ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಾತನಾಡಿದ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಅಭಿವೃದ್ಧಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಅವರು, ವಿಶ್ವಮಟ್ಟದ ಶ್ರೇಷ್ಠ ವಾಸ್ತುಶಿಲ್ಪದ ತಾಣವಾಗಿರುವ ಜಿಲ್ಲೆಗೆ ವಿದೇಶಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುತ್ತಿದೆ.



ಇಂಜಿನಿಯರಿಂಗ್ ಅದ್ಭುತವಾಗಿರುವ ಗೋಳಗುಮ್ಮಟ, ತಾಜ್‌ಮಹಲ್ ನಿರ್ಮಾಣಕ್ಕೆ ಸ್ಫೂರ್ತಿಯಾಗಿರುವ ಇಬ್ರಾಹಿಂ ರೋಜಾ, ಬಾರಾಕಮಾನ್ ಸೇರಿದಂತೆ ಹಲವು ಸ್ಮಾರಕಗಳು ವಿಶ್ವಮಟ್ಟದಲ್ಲಿ ಗಮನ ಸೆಳೆಯುವಂತಹ ಶ್ರೇಷ್ಠತೆಯನ್ನು ಹೊಂದಿವೆ.

ಈ ಹಿನ್ನೆಲೆಯಲ್ಲಿ ವಿಜಯಪುರದ ಪ್ರವಾಸೋದ್ಯಮ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು, ವಾಸ್ತುಶಿಲ್ಪ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ವಿಶ್ವಮಟ್ಟದಲ್ಲಿ ಪರಿಣಾಮಕಾರಿಯಾಗಿ ಪರಿಚಯಿಸಿ, ವಿದೇಶಿ ಪ್ರವಾಸಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು.

ಕಲ್ಯಾಣ ಕರ್ನಾಟಕದಲ್ಲಿ ನವೋದ್ಯಮಗಳಿಗೆ ಉತ್ತೇಜನ

ಉದ್ಯಮ ಸ್ಥಾಪನೆಗೆ 50 ಲಕ್ಷ ವರೆಗೆ ಸಹಾಯಧನ: ಪ್ರಿಯಾಂಕ್ ಖರ್ಗೆ

ಕಲಬುರಗಿ, ನ. 15 : ರಾಜ್ಯ ಸರ್ಕಾರ ಜಾರಿಗೆ ತಂದಿರುವ 'ಎಲಿವೇಟ್ ಕರ್ನಾಟಕ' ಕಾರ್ಯಕ್ರಮವು ಉದ್ಯಮ ಕ್ಷೇತ್ರದಲ್ಲಿ ದೇಶದಲ್ಲಿಯೇ ಮಹತ್ವದ ಬದಲಾವಣೆ ತರಲಿದೆ. ನವೋದ್ಯಮಿಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಈ ಯೋಜನೆ ರೂಪಿಸಲಾಗಿದ್ದು, ರಾಜ್ಯದ ಆರ್ಥಿಕ ಪ್ರಗತಿಯಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಎಲಿವೇಟ್ ಕಾರ್ಯಕ್ರಮದಡಿ 1,500 ನವೋದ್ಯಮಗಳಿಗೆ ಗರಿಷ್ಠ 50 ಲಕ್ಷ ರೂ. ವರೆಗೆ ಸಹಾಯಧನ ನೀಡಲಾಗುತ್ತಿದೆ. ಯುವ ಸಮೂಹ ಉದ್ಯಮಶೀಲತೆಯತ್ತ ಆಕರ್ಷಿತರಾಗಲು ಇದು ನೆರವಾಗಲಿದೆ. ಇಂತಹ ಯೋಜನೆ ಬೇರೆ ಯಾವುದೇ ರಾಜ್ಯದಲ್ಲಿಲ್ಲ. ಬೆಂಗಳೂರಿನ ಹೊರಗಿನ ನವೋದ್ಯಮಿಗಳ ಪಾಲು ಕೇವಲ ಶೇ.28ರಷ್ಟಿದೆ. ಕಲ್ಯಾಣ ಕರ್ನಾಟಕ ಸೇರಿದಂತೆ ರಾಜ್ಯದ ಇತರ ಭಾಗಗಳಲ್ಲಿ ನವೋದ್ಯಮಗಳ ಸಂಖ್ಯೆ ಹೆಚ್ಚಿಸುವ ಉದ್ದೇಶದಿಂದ 'ಬಿಯಾಂಡ್ ಬೆಂಗಳೂರು' ಯೋಜನೆ ರೂಪಿಸಲಾಗಿದೆ. ಮುಂದಿನ 10 ವರ್ಷಗಳಲ್ಲಿ ಡೀಪ್‌ಟೆಕ್ ಕ್ಷೇತ್ರದಲ್ಲಿ ನವೋದ್ಯಮ ಸ್ಥಾಪಿಸುವ ಆಯ್ದ ಉದ್ಯಮಿಗಳಿಗೆ 1



ಕೋಟಿ ರೂ. ವರೆಗೆ ಸಹಾಯಧನ ನೀಡುವ ಯೋಜನೆಯನ್ನೂ ರೂಪಿಸಲಾಗಿದೆ. ನವೋದ್ಯಮಗಳು ಬೆಂಗಳೂರಿಗೆ ಮಾತ್ರ ಸೀಮಿತವಾಗದೆ ಎರಡನೇ ಮತ್ತು ಮೂರನೇ ಹಂತದ ನಗರಗಳಿಗೂ ವಿಸ್ತರಣೆಯಾಗಬೇಕು. ಸ್ಥಳೀಯ ಆರ್ಥಿಕತೆಯನ್ನು ಬಲಪಡಿಸಿ, ಯುವಕರನ್ನು ಉದ್ಯೋಗಾಕಾಂಕ್ಷಿಗಳ ಬದಲಿಗೆ ಉದ್ಯೋಗದಾತರನ್ನಾಗಿ ರೂಪಿಸುವ ಉದ್ದೇಶದಿಂದ ಮಹತ್ವಾಕಾಂಕ್ಷಿ 'ಲೀಪ್' (ಲೋಕಲ್ ಎಕನಾಮಿಕ್ ಅಕ್ಸಲರೇಟರ್ ಪ್ರೋಗ್ರಾಂ) ಯೋಜನೆ ಜಾರಿಗೆ ತರಲಾಗಿದೆ ಎಂದರು.

ಉದ್ಯಮಕ್ಕೆ ಎಲ್ಲ ರೀತಿಯ ಸಹಕಾರ : ಉದ್ಯಮಿಗಳಿಗೆ ಸರ್ಕಾರದಿಂದ ಯಾವುದೇ ಸಬ್ಸಿಡಿ ಅಥವಾ ಸಹಕಾರ ಸಿಗುವುದಿಲ್ಲ ಎಂಬ ಭ್ರಮೆಯಿಂದ ಹೊರಬರಬೇಕು. ಇದು ನಿಮ್ಮ ಸರ್ಕಾರವಾಗಿದ್ದು, ಉದ್ಯಮ ಸ್ಥಾಪನೆಗೆ ಅಗತ್ಯವಿರುವ ಎಲ್ಲ ರೀತಿಯ ಸಹಕಾರ ನೀಡಲು ಬದ್ಧವಾಗಿದೆ. ನವೋದ್ಯಮ ಆರಂಭಿಸುವಾಗ ವೈಫಲ್ಯ ಎದುರಾದರೂ ಎದೆಗುಂದದೆ ಮುನ್ನಡೆಯಬೇಕು. ಸ್ಥಳೀಯ ಗುರುತಿನೊಂದಿಗೆ 'ಲೋಕಲ್ ಟು ವೋಕಲ್' ಪರಿಕಲ್ಪನೆಯಲ್ಲಿ ಹೊಸ ಆಲೋಚನೆಗಳೊಂದಿಗೆ ಉದ್ಯಮ ಆರಂಭಿಸಿ, ಉತ್ಪನ್ನಗಳ ಸ್ಥಿರ ವಿತರಣಾ ವ್ಯವಸ್ಥೆ ರೂಪಿಸಿಕೊಂಡರೆ ಯಶಸ್ಸು ಸಾಧ್ಯ.

ಮಾರುಕಟ್ಟೆ ವಿಸ್ತರಣೆಗೆ ಕೌಶಲ್ಯ ಅಗತ್ಯ : ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಡಾ. ಶರಣಪ್ರಕಾಶ ಪಾಟೀಲ್ ಮಾತನಾಡಿ, ಈ ಭಾಗದ ರೈತರಿಗೆ ಕೃಷಿ ಉತ್ಪಾದನೆಯ ಅನುಭವವಿದೆ. ಆದರೆ ಕೃಷಿ ಉತ್ಪನ್ನಗಳ ಮಾರುಕಟ್ಟೆ ವಿಸ್ತರಿಸುವ ಕೌಶಲ್ಯದ ಕೊರತೆಯಿದೆ. ಈ ಕೊರತೆಯನ್ನು ನೀಗಿಸುವ ಕೆಲಸವಾಗಬೇಕು. ಕೃಷಿ ಉತ್ಪನ್ನಗಳಿಗೆ ಮೌಲ್ಯವರ್ಧನೆ ಮಾಡುವ ಮೂಲಕ ರೈತರ ಆದಾಯ ಹೆಚ್ಚಿಸುವುದು ಇಂದಿನ ಅಗತ್ಯವಾಗಿದೆ ಎಂದರು. ಯು.ಕೆ. ಅಂಡ್ ಕಂಪನಿಯ ಸ್ಥಾಪಕ ಡಾ.ಕೆ.ಉಲ್ಲಾಸ್ ಕಾಮತ್ ಅವರು ದೇಶದ ಪ್ರಸ್ತುತ ಆರ್ಥಿಕ ಪರಿಸ್ಥಿತಿಯ ಕುರಿತು ಮಾಹಿತಿ ನೀಡಿದರು.

ದಲಿತ ಬಂಡಾಯ ಸಾಹಿತ್ಯದಿಂದ, ಸಾಮಾಜಿಕ ವ್ಯವಸ್ಥೆಯಲ್ಲಿ ಹೊಸ ಸಂಚಲನ: ಖಂಡ್ರೆ

ಬೀದರ, ನ.15: ದಲಿತ ಬಂಡಾಯ ಸಾಹಿತ್ಯ ಚಳವಳಿಗಳಿಂದ ಸಮಾಜದಲ್ಲಿ ಮತ್ತು ನಾಡಿನಲ್ಲಿ ಹೊಸ ಸಂಚಲನ ಸೃಷ್ಟಿಸಿತು. ಸಾಮಾಜಿಕ ಅಸಮಾನತೆ ವಿರುದ್ಧ ದೊಡ್ಡ ಮಟ್ಟದಲ್ಲಿ ದನಿ ಎತ್ತಿದ್ದೆ ಈ ಚಳವಳಿಯಿಂದಾಗಿ ಜಿಡ್ಡುಗಟ್ಟಿದ್ದ ಸಾಮಾಜಿಕ ವ್ಯವಸ್ಥೆಯಲ್ಲಿ ಬಹಳಷ್ಟು ಸುಧಾರಣೆಗೆ ಕಾರಣವಾಯಿತು ಎಂದು ಜಿಲ್ಲಾ ಉಸ್ತುವರಿ ಸಚಿವ ಈಶ್ವರ ಖಂಡ್ರೆ ಹೇಳಿದರು.

ಈ ದೇಶದ ಸಂವಿಧಾನದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಕೊಡದೇ ಇದ್ದಿದ್ದರೆ ಬಂಡಾಯ ಸಾಹಿತ್ಯವೇ ಹೊರ ಬರುತ್ತಿರಲಿಲ್ಲ. ವಚನ ಸಾಹಿತ್ಯ, ದಾಸ ಸಾಹಿತ್ಯದಲ್ಲೂ ಬಂಡಾಯ ಕಾಣುತ್ತೇವೆ. ಸಾಹಿತ್ಯ ಯಾವಾಗಲೂ ಅಧಿಕಾರಸ್ಥರ ಪರ ಇರಬಾರದು. ಅಧಿಕಾರಸ್ಥರ ಲೋಪದೋಷ ಹೊರ ತರುವ ಕೆಲಸ ಸಾಹಿತ್ಯದ್ದು. ಸಾಮಾಜಿಕ ನ್ಯಾಯ ಎಂಬುದು ಯಾವುದೇ ಜಾತಿ, ಮತ, ಭಾಷೆಗೆ ಸೀಮಿತವಲ್ಲ. ಕಟ್ಟ ಕಡೆಯ ವ್ಯಕ್ತಿಗೂ ಸಾಮಾಜಿಕ ನ್ಯಾಯ ಕೊಟ್ಟರೆ ಪ್ರಜಾಪ್ರಭುತ್ವ




ಯಶಸ್ವಿಯಾಗುತ್ತದೆ. ಇದು ದಲಿತ ಬಂಡಾಯ ಚಳವಳಿ ಆಶಯವೂ ಹೌದು. ಇಂದಿಗೂ ಸಮಾಜದಲ್ಲಿ ಜಾತಿಯತೆ, ಅಸ್ಪೃಶ್ಯತೆ, ಲಿಂಗಭೇದ, ಯುದ್ಧ ನಡೆಯುತ್ತಿದೆ. ಜಗತ್ತಿನಲ್ಲಿ ಆತಂಕದ ವಾತಾವರಣ ಇದೆ. ಸಮಾಜ ಒಡೆಯುವ ಕೆಲಸಗಳು ನಡೆಯುತ್ತಿವೆ. ಇದರ ವಿರುದ್ಧ ಎಲ್ಲರೂ ಜಾಗೃತರಾಗಬೇಕು. ಈ ದೇಶದ 140 ಕೋಟಿ ಜನರೆಲ್ಲ ಸಾಮಾಜಿಕವಾಗಿ, ಆರ್ಥಿಕವಾಗಿ ಸದೃಢರಾದರೆ ಭಾರತ ವಿಶ್ವಗುರುವಾಗಲು ಸಾಧ್ಯ ಎಂದರು.

ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿದ ಶಾಸಕ ರಹೀಂ ಖಾನ್, ಎಲ್ಲರಿಗೂ ಸಮಾನ ಅವಕಾಶಗಳು ಸಿಗಬೇಕೆಂದು ಹೇಳಿದವರು ಬಸವಣ್ಣನವರು. ಅದೇ ವಿಚಾರಗಳನ್ನು ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಹೇಳಿದ್ದಾರೆ. ದಲಿತ ಬಂಡಾಯ ಚಳವಳಿಯ ಉದ್ದೇಶವೂ ಅದೇ ಆಗಿದೆ. ಇಂತಹ ದ್ದೊಂದು ಸಮ್ಮೇಳನ ಮೊದಲ ಬಾರಿಗೆ ಜಿಲ್ಲೆಯಲ್ಲಿ ಆಯೋಜಿಸಿ, ದಲಿತ ಸಮುದಾಯದ ವ್ಯಕ್ತಿಯನ್ನು ಸರ್ವಾಧ್ಯಕ್ಷರಾಗಿ ಮಾಡಿರುವುದು ಶ್ಲಾಘನಾರ್ಹ ಕೆಲಸ ಎಂದರು.

ಶಾಸಕ ಡಾ. ಶೈಲೇಂದ್ರ ಕೆ. ಬೆಲ್ದಾಳೆ ಪುಸ್ತಕ ಮಳಿಗೆ ಉದ್ಘಾಟಿಸಿ, ಸಮಾಜದಲ್ಲಿ ಯಾವುದೇ ಸಮುದಾಯ ದವರ ಮೇಲೆ ಅನ್ಯಾಯವಾದರೂ ಅದನ್ನು ಎಲ್ಲರೂ ಒಂದೇ ಧ್ವನಿಯಲ್ಲಿ ವಿರೋಧಿಸಬೇಕು ಎಂದು ಹೇಳಿದರು.

ಆಣದೂರ ವೈಶಾಲಿನಗರ ಧಮ್ಮದರ್ಶನ ಭೂಮಿಯ ಭಂತೆ ವರಜ್ಯೋತಿ ಸಾನ್ನಿಧ್ಯ ವಹಿಸಿದ್ದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸಿ.ಬಿ. ಸೋಮಶೆಟ್ಟಿ, ಶಾಂತಾಬಾಯಿ ಕಾಂಬಳೆ, ರಾಜ್ಯ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ದೇವಿದಾಸ ಚಿಮಕೋಡ್, ವಿವಿಧ ಕ್ಷೇತ್ರಗಳ ಸಾಧಕರಾದ ಎಸ್.ಎಂ. ಜನವಾಡಕರ, ಶಿವಯ್ಯ ಸ್ವಾಮಿ, ಓಂಕಾರ ಮಠಪತಿ, ಗುರುನಾಥ ರಾಜಗೀರಾ, ಶಿವಲೀಲಾ ಸುನೀಲ ಗಂದಿಗುಡೆ ಅವರನ್ನು ಸನ್ಮಾನಿಸಲಾಯಿತು. ಎಮ್.ಎಸ್. ಮನೋಹರ್ ಸ್ವಾಗತಿಸಿದರೆ, ಶಿವಶಂಕರ ಟೋಕರೆ ನಿರೂಪಿಸಿದರು. ಸಚಿನ್ ಮಠಪತಿ ವಂದಿಸಿದರು. ರೇಣುಕಾ ಎನ್.ಬಿ. ಹಾಗೂ ಸಂಗಡಿಗರು ನಾಡಗೀತೆ ಹಾಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸುರೇಶ ಚನಶೆಟ್ಟಿ ಮಾತನಾಡಿ, ಈ ನಾಡಿಗಾಗಿ ಶ್ರಮಿಸಿರುವ ಪ್ರಭುರಾವ್ ಕಂಬಳಿವಾಲೆ ಹಾಗೂ ಜಯದೇವಿತಾಯಿ ಲಿಗಾಡೆ ಅವರ ಹೆಸರಿನಲ್ಲಿ ಸರ್ಕಾರ ಈಗಾಗಲೇ ಪ್ರತಿಷ್ಠಾನ ಸ್ಥಾಪಿಸಿದೆ. ಅದೇ ರೀತಿ ಲಿಂಗೈಕ್ಯ ಚನ್ನಬಸವ ಪಟ್ಟದ್ದೇವರು ಹಾಗೂ ದಿವಂಗತ ಭೀಮಣ್ಣ ಖಂಡ್ರೆಯವರ ಹೆಸರಲ್ಲೂ ಪ್ರತಿಷ್ಠಾನ ಸ್ಥಾಪಿಸಬೇಕು. ಜಿಲ್ಲಾ ಕನ್ನಡ ಭವನ, ಪರಿಷತ್ತಿನ ಸುಪರ್ದಿಗೆ ಮಹಿಸಬೇಕು. ರಂಗಮಂದಿರ ನವೀಕರಣ ಗೊಳಿಸಬೇಕು ಎಂದು ಆಗ್ರಹಿಸಿದರು. ಸಚಿವ ಖಂಡ್ರೆ ಅವರು ತಮ್ಮ ಭಾಷಣದಲ್ಲಿ ಮಾತನಾಡಿ, ಎಲ್ಲಾ ಬೇಡಿಕೆಗಳನ್ನು ಪ್ರಾಮಾಣಿಕವಾಗಿ ಈಡೇರಿಸಲಾಗುವುದು ಎಂದು ಆಶ್ವಾಸನೆ ನೀಡಿದರು.



71ನೆಯ ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಪ್ರಶಸ್ತಿ ಪಡೆದ ಸಾಧಕರಾದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಎ. ಸಿ. ಭಂಡಾರಿ ಹಾಗೂ ಹಿರಿಯ ಜಾನಪದ ತಜ್ಞೆಮತ್ತು ಸಂಶೋಧಕಿ ಡಾ. ಇಂದಿರಾ ಹೆಗ್ಡೆ ಅವರನ್ನು ಕಲಬುರಗಿ ಆಕಾಶವಾಣಿಯ ನಿವೃತ್ತ ಕಾರ್ಯಕ್ರಮ ಮುಖ್ಯಸ್ಥ ಹಾಗೂ ಕಲಬುರಗಿ ದಕ್ಷಿಣ ಕನ್ನಡ ಸಂಘದ ಮಾಜಿ ಅಧ್ಯಕ್ಷ ಡಾ. ಸದಾನಂದ ಪೆರ್ಲ ಮಂಗಳೂರಿನ ತುಳು ಅಕಾಡೆಮಿಯ ಸಿರಿ ಚಾವಡಿಯಲ್ಲಿ ಸನ್ಮಾನಿಸಿ ಗೌರವಿಸಿದರು.

ಸಿದ್ಧಸಿರಿ ಬ್ಯಾಂಕ್ ಮೇಲಿನ ದಾಳಿ ವದಂತಿ ಸುಳ್ಳು

ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸ್ಪಷ್ಟನೆ

ಸಿದ್ಧಸಿರಿ ಸಕ್ಕರೆ ಕಾರ್ಖಾನೆ ಹಣ ದುರುಪಯೋಗ ಆರೋಪ ತಳ್ಳಿಹಾಕಿದ ಬಸನಗೌಡ ಪಾಟೀಲ್ ಯತ್ನಾಳ್



ವಿಜಯಪುರ, ನ.15: ಸಿದ್ಧಸಿರಿ ಬ್ಯಾಂಕ್ ಮೇಲೆ ಜಾರಿ ನಿರ್ದೇಶನಾಲಯ ಮತ್ತು ಆದಾಯ ತೆರಿಗೆ ಇಲಾಖೆ ದಾಳಿ ನಡೆದಿದೆ ಎಂಬ ವದಂತಿಗಳಿಗೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ವಿಜಯಪುರದಲ್ಲಿ ಸ್ಪಷ್ಟನೆ ನೀಡಿದ್ದಾರೆ.

ಈ ಕುರಿತು ಮಾತನಾಡಿದ ಅವರು, ಈವರೆಗೆ ರಾಜ್ಯ ಸರ್ಕಾರದ ಸಹಕಾರಿ ಇಲಾಖೆಯ ವ್ಯಾಪ್ತಿಯಲ್ಲಿದ್ದ ಸಿದ್ಧಸಿರಿ ಬ್ಯಾಂಕ್ ಅನ್ನು ಇದೀಗ 'ಸಿದ್ಧಸಿರಿ ಮಲ್ಟಿಸ್ಟೇಟ್ ಮಲ್ಟಿಪರ್ಪಸ್ ಬ್ಯಾಂಕ್' ಆಗಿ ಕೇಂದ್ರ ಸಹಕಾರಿ ಇಲಾಖೆಯ ಅಡಿಯಲ್ಲಿ ನೋಂದಾಯಿಸಲಾಗಿದೆ. ಆಗಸ್ಟ್ ತಿಂಗಳಿನಲ್ಲಿ ಇಲಾಖೆಯಿಂದ ಕೇಳಲಾಗಿದ್ದ ಮಾಹಿತಿಗೆ ಸೆಪ್ಟೆಂಬರ್‌ನಲ್ಲೇ ಸಮರ್ಪಕ ಉತ್ತರ ನೀಡಲಾಗಿದೆ. ಅದು ಕೇವಲ ಸಾಮಾನ್ಯ ಮಾಹಿತಿ ಕೋರಿಕೆಯಾಗಿತ್ತೇ ಹೊರತು ಯಾವುದೇ ನೋಟಿಸ್ ಆಗಿರಲಿಲ್ಲ ಎಂದು ತಿಳಿಸಿದರು. ಆಗಸ್ಟ್‌ನಲ್ಲಿ ನೀಡಲಾದ ಪತ್ರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಬೆನ್ನಲ್ಲೇ ಹಲವು ಗೊಂದಲಗಳು ಸೃಷ್ಟಿಯಾಗಿವೆ.

ರಾಜ್ಯ ಮತ್ತು ಕೇಂದ್ರದ ಸಹಕಾರಿ ಕಾನೂನುಗಳು ಭಿನ್ನವಾಗಿರುವುದರಿಂದ, ಕೇಂದ್ರ ಇಲಾಖೆಯು ಕೆಲವು ದಾಖಲೆ ಹಾಗೂ ಸ್ಪಷ್ಟನೆಗಳನ್ನು ಕೇಳುವುದು ಸಹಜ ಪ್ರಕ್ರಿಯೆ. ಆದರೆ, ಇದನ್ನೇ ದೊಡ್ಡ ಅವ್ಯವಹಾರ ಎಂಬಂತೆ ಬಿಂಬಿಸಿ ತಮ್ಮ ವಿರುದ್ಧ ಷಡ್ಯಂತ್ರ ನಡೆಸಲಾಗುತ್ತಿದೆ ಎಂದು ಯತ್ನಾಳ್ ಆರೋಪಿಸಿದರು.

ಸಿದ್ಧಸಿರಿ ಸಕ್ಕರೆ ಕಾರ್ಖಾನೆಯ ಹಣ ದುರುಪಯೋಗದ ಆರೋಪ ಗಳನ್ನು ತಳ್ಳಿಹಾಕಿದ ಯತ್ನಾಳ್, ಕಾರ್ಖಾನೆಯ ಮಾಲೀಕತ್ವ ತಮಗೆ ಸೇರಿಲ್ಲ, ಬದಲಾಗಿ ಸಿದ್ಧಸಿರಿ ಸಹಕಾರಿ ಬ್ಯಾಂಕ್ ಅದರ ಮಾಲೀಕವಾಗಿದೆ ಎಂದರು.

ರಾಮನಗೌಡ ಬಸನಗೌಡ ಪಾಟೀಲ್ ಅವರು ಕೇವಲ ಅಧ್ಯಕ್ಷರಾಗಿದ್ದು, ಎಲ್ಲಾ ಆಸ್ತಿಗಳು ಸಂಸ್ಥೆಗೆ ಸೇರಿವೆ. ತಾವು ಬೇನಾಮಿ ಆಸ್ತಿ ಮಾಡಿದ್ದಾರೆ ಎಂಬುದು ಸಂಪೂರ್ಣ ಸುಳ್ಳು ಎಂದು ಸ್ಪಷ್ಟಪಡಿಸಿದರು. ತಮ್ಮ ಕುಟುಂಬದವರ ಹೆಸರಿನಲ್ಲಿ ಒಂದೇ ಒಂದು ಗುಂಟೆ ಜಮೀನು ಅಥವಾ ಬೇನಾಮಿ ಸಾಲ ಪಡೆದಿರುವುದನ್ನು ಸಾಬೀತುಪಡಿಸಿದರೆ, ಆರೋಪ ಮಾಡಿದವರಿಗೆ 1 ಕೋಟಿ ರೂಪಾಯಿ ಬಹುಮಾನ ನೀಡುವುದಾಗಿ ಯತ್ನಾಳ್ ಬಹಿರಂಗ ಸವಾಲು ಹಾಕಿದ್ದಾರೆ.

ವಿಎಸ್‌ಕೆಯು ವಾರ್ಷಿಕ ಘಟಿಕೋತ್ಸವ

ವಿವಿಧ ವಿಭಾಗಗಳ 137 ವಿದ್ಯಾರ್ಥಿಗಳಿಂದ ಇಂದು ರ‍್ಯಾಂಕ್ ಪ್ರಮಾಣಪತ್ರ ಸ್ವೀಕೃತಿ

ಬಳ್ಳಾರಿ, ನ.15– ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ 2024–25ನೇ ಸಾಲಿನ 14ನೇ ವಾರ್ಷಿಕ ಘಟಿಕೋತ್ಸವ ಸಮಾರಂಭ ಸೋಮವಾರ ವಿವಿಯ ಬಯಲು ರಂಗಮಂದಿರದ ಆವರಣದಲ್ಲಿ ಜರುಗಲಿದೆ ಎಂದು ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ.ಮುನಿರಾಜು ತಿಳಿಸಿದರು.

ಭಾನುವಾರ ಸಭಾಂಗಣದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯಪಾಲರಾದ ಡಾ.ಸುಧಾ ಯಾದವ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಕರ್ನಾಟಕ ಮತ್ತು ಒಡಿಶಾ ಉಚ್ಚ ನ್ಯಾಯಾಲಯಗಳ ನಿವೃತ್ತ ನ್ಯಾಯಮೂರ್ತಿ ಡಾ. ಕೃಷ್ಣ ಎಸ್. ದೀಕ್ಷಿತ್ ಅವರು ಘಟಿಕೋ ತ್ಸವದ ಮುಖ್ಯ ಭಾಷಣ ಮಾಡಲಿದ್ದಾರೆ. ರಾಜ್ಯ ಉನ್ನತ ಶಿಕ್ಷಣ ಸಚಿವ ಹಾಗೂ ವಿವಿ ಉಪ–ಕುಲಾಧಿಪತಿ ಬಸವರಾಜ ರಾಯರೆಡ್ಡಿ ಕಾರ್ಯಕ್ರಮ ದಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಕುಲಪತಿ ಪ್ರೊ.ಎಂ.ಮುನಿರಾಜು ಅವರು ಘಟಿಕೋತ್ಸವದ ನೇತೃತ್ವ ವಹಿಸಲಿದ್ದು, ಕುಲಸಚಿವ ಪ್ರೊ.ವಿ.ಲೋಕೇಶ್ ಹಾಗೂ ಮೌಲ್ಯ ಮಾಪನ ಕುಲಸಚಿವ ಪ್ರೊ.ಪಿ.ಕಣ್ಣನ್ ಸೇರಿದಂತೆ ವಿವಿಯ ಎಲ್ಲಾ ನಿಕಾಯಗಳ



ಡೀನ್‌ಗಳು, ಮುಖ್ಯಸ್ಥರು, ವಿವಿಧ ಮಹಾವಿದ್ಯಾಲಯದ ಪ್ರಾಂಶುಪಾಲರು, ಬೋಧಕ– ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿರಲಿ ದ್ದಾರೆ ಎಂದು ತಿಳಿಸಿದರು.

ಚಿನ್ನದ ಪದಕ: ಸ್ನಾತಕ ಮತ್ತು ಸ್ನಾತಕೋತ್ತರ ವಿವಿಧ ವಿಭಾಗಗಳ 42 ವಿದ್ಯಾರ್ಥಿಗಳು ಒಟ್ಟು 50 ಚಿನ್ನದ ಪದಕಗಳನ್ನು ಮುಡಿಗೇರಿಸಿ ಕೊಳ್ಳಲಿದ್ದಾರೆ.

ಪಿಎಚ್‌ಡಿ: ವಿವಿಧ ವಿಭಾಗಗಳ ಒಟ್ಟು 52 ಸಂಶೋಧನಾರ್ಥಿಗಳು ಡಾಕ್ಟರೇಟ್ ಪದವಿ ಪಡೆಯಲಿದ್ದಾರೆ. ಅದೇ ರೀತಿಯಾಗಿ ಎಲ್ಲಾ ವಿಭಾಗಗಳ ಸ್ನಾತಕ ಪದವಿಯ 66 ವಿದ್ಯಾರ್ಥಿ ಗಳು ಮತ್ತು ಸ್ನಾತಕೋತ್ತರ ಪದವಿಯಿಂದ 71 ವಿದ್ಯಾರ್ಥಿಗಳು ಸೇರಿ ಒಟ್ಟು 137 ವಿದ್ಯಾರ್ಥಿಗಳು ರ‍್ಯಾಂಕ್ ಪ್ರಮಾಣಪತ್ರಗಳನ್ನು ಪಡೆಯಲಿದ್ದಾರೆ.

ಐದು ವರ್ಷ

ಡಿಸಿ ಪ್ರಯತ್ನ ಯಶಸ್ವಿ, ಟನ್‌ಗೆ 3,500 ರೂ.ಗೆ ಒಪ್ಪಿಗೆ: ಲಾಭ ಹಂಚಿಕೆಯಲ್ಲೂ ಪಾಲು ಪಡೆದು ಸಂಭ್ರಮಿಸಿದ ರೈತರು

ಕಲಬುರಗಿ, ನ. 15: ಕಬ್ಬಿನ ದರ ನಿಗದಿಗಾಗಿ ಹಲವು ದಿನಗಳಿಂದ ರೈತರು ನಡೆಸುತ್ತಿದ್ದ ಹೋರಾಟಕ್ಕೆ ಕೊನೆಗೂ ಜಯ ಸಿಕ್ಕಿದೆ. ಜಿಲ್ಲಾಧಿಕಾರಿಗಳ ಸತತ ಪ್ರಯತ್ನದ ಫಲವಾಗಿ ಪ್ರತಿ ಟನ್ ಕಬ್ಬಿಗೆ 3,500 ರೂ. ಹಾಗೂ ಲಾಭಾಂಶ ಹಂಚಿಕೆ ಹಣ 100 ರೂ. ನೀಡಲಾಗುವುದು ಎಂದು ಕಾರ್ಖಾನೆಗಳು ಒಪ್ಪಿಗೆ ಸೂಚಿಸಿವೆ. ಇದರಿಂದ ಹಲವು ದಿನಗಳ ಕಬ್ಬು ಕಗ್ಗಂಟಿಗೆ ಮುಕ್ತಿ ದೊರೆತಂತಾಗಿ ಚಳವಳಿ ನಿರತ ರೈತರು ಕುಣಿದು ಕುಪ್ಪಳಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ಚುನ್ನಪ್ಪ ಪೂಜಾರಿ, ಶಶಿಕಾಂತ್ ಗುರೂಜಿ ಸೇರಿ ಸಾವಿರಾರು ರೈತರು ಬೈಕ್ ಹಾಗೂ ಕಾರ್‌ಗಳ ರ‍್ಯಾಲಿಯಲ್ಲಿ ಶನಿವಾರ ಮಧ್ಯಾಹ್ನ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿ ಬೆಳಗಾವಿ ಮಾದರಿಯಲ್ಲಿ 3,600 ರೂ. ಟನ್ ಕಬ್ಬಿಗೆ ನಿಗದಿಗೊಳಿಸಬೇಕೆಂದು ಪಟ್ಟು ಹಿಡಿದು ರಾತ್ರಿ 11 ಗಂಟೆವರೆಗೆ ಹೋರಾಟ ನಡೆಸಿದರು. ಇದರಿಂದ ಜಿಲ್ಲಾಡಳಿತದ ಮಧ್ಯಸ್ಥಿಕೆಯಲ್ಲಿ ರಾತ್ರಿ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ನೇತೃತ್ವದಲ್ಲಿ ನಡೆದ ಎರಡೂವರೆ ಗಂಟೆಗೂ ಅಧಿಕ ಅವಧಿಯ ಮ್ಯಾರಥಾನ್ ಸಭೆಯಲ್ಲಿ, ರೈತರು ಹಾಗೂ ಕಾರ್ಖಾನೆಗಳ ಪ್ರತಿನಿಧಿಗಳ ನಡುವೆ ಸುದೀರ್ಘ ಚರ್ಚೆ ನಡೆಯಿತು. ಆರಂಭದಲ್ಲಿ 3,450 ದರಕ್ಕೆ ಕಾರ್ಖಾನೆಗಳು ಪಟ್ಟು ಹಿಡಿದಿದ್ದರೆ, ರೈತರು 3600 ರೂ. ನೀಡಲೇಬೇಕೆಂದು ಪಟ್ಟು ಹಿಡಿದಿದ್ದರು. ಸುದೀರ್ಘ ಮಾತುಕತೆ, ಹಗ್ಗಜಗ್ಗಾಟದ ಬಳಿಕ ಕಾರ್ಖಾನೆಗಳು ಕಬ್ಬಿಗರ ಬೇಡಿಕೆಗೆ ಮಣಿಯಲೇ ಬೇಕಾಯಿತು. ಇಲ್ಲವಾದರೆ ಜಿಲ್ಲೆಯ ಕಬ್ಬು ಮಹಾರಾಷ್ಟ್ರಕ್ಕೆ ಕಳಿಸಬೇಕಾಗುತ್ತದೆಂಬ ಬೆದರಿಕೆಗೆ ಕಾರ್ಖಾನೆಗಳು ಅನಿವಾರ್ಯವಾಗಿ ಬೇಡಿಕೆಗಳಿಗೆ ಮಣಿಯಬೇಕಾಯಿತು.

ಚೌಡಾಪುರದಿಂದ ಕಲಬುರಗಿಗೆ ಹೋರಾಟ ಶಿಫ್ಟ್: 3,600 ದರಕ್ಕಾಗಿ ಅಫಜಲಪುರ ತಾಲೂಕಿನ ಚೌಡಾಪುರದಲ್ಲಿ 16 ದಿನಗಳಿಂದ ನಡೆಯುತ್ತಿದ್ದ ಹೋರಾಟ, ಶನಿವಾರ ಮಧ್ಯಾಹ್ನ ಜಿಲ್ಲಾ ಕೇಂದ್ರಕ್ಕೆ ಶಿಫ್ಟ್ ಆಗಿತ್ತು. ಕರ್ನಾಟಕ ರಾಜ್ಯ ರೈತ ಸಂಘದ ನೇತೃತ್ವದಲ್ಲಿ ಚೂನಪ್ಪ ಪೂಜಾರಿ, ಶಶಿಕಾಂತ್ ಗುರೂಜಿ ಸೇರಿ ಸಾವಿರಾರು ರೈತರು ಬೈಕ್ ಹಾಗೂ ಕಾರುಗಳ ರ‍್ಯಾಲಿ ಮೂಲಕ ಆಗಮಿಸಿದ್ದರು. ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಹೋರಾಟದಲ್ಲಿ ಸಾವಿರಾರು ರೈತರು ಭಾಗವಹಿಸಿದ್ದರು. ರೈತರ ಬೃಹತ್ ಪ್ರತಿಭಟನೆಯಿಂದ ಎಸ್‌ವಿಪಿ ವೃತ್ತದಿಂದ ಜಗತ್ ವೃತ್ತದವರೆಗೆ ವಾಹನ ಸಂಚಾರ ಅಸ್ತವ್ಯಸ್ತಗೊಂಡು ಸಾರ್ವಜನಿಕರು ಪರದಾಡಿದರು. ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸರು ಬಿಗಿ ಬಂದೋಬಸ್ತ್ ಕಲ್ಪಿಸಿದ್ದರು.

ಡಿಸಿ ಸಭೆಗೆ ಪಟ್ಟು ಕೊನೆಗೂ ಫಲ: ಪ್ರತಿಭಟನೆ ತೀವ್ರಗೊಂಡ ಹಿನ್ನೆಲೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕರು ಹಾಗೂ ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ರೈತ ಮುಖಂಡರೊಂದಿಗೆ ಸಭೆ ನಡೆಸಿದರು. ಆದರೆ, ಜಿಲ್ಲಾಧಿಕಾರಿ ಹಾಜರಿಲ್ಲದ ಕಾರಣ ರೈತ ಮುಖಂಡರು 3,450 ದರದ ಪ್ರಸ್ತಾವನೆ ಒಪ್ಪದೆ ಸಭೆಯಿಂದ ಹೊರಬಂದು ಪ್ರತಿಭಟನೆ ಮುಂದುವರಿಸಿದ್ದರು. ಜಿಲ್ಲಾಧಿಕಾರಿಯೇ ಖುದ್ದಾಗಿ ಬಂದು ದರದ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಬೇಕು ಎಂದು ಪಟ್ಟು ಹಿಡಿದಿದ್ದರು. ರೈತರ ಒತ್ತಡಕ್ಕೆ ಮಣಿದ ಜಿಲ್ಲಾಡಳಿತ, ರಾತ್ರಿ 8.30ಕ್ಕೆ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಅವರ ನೇತೃತ್ವದಲ್ಲಿಸಭೆ ಆರಂಭಗೊಂಡಿತು. ರೈತರು ಹಾಗೂ ಕಾರ್ಖಾನೆಗಳ ಅಧಿಕಾರಿಗಳೊಂದಿಗೆ ಪ್ರತ್ಯೇಕವಾಗಿ ಚರ್ಚಿಸಿದ ಜಿಲ್ಲಾಧಿಕಾರಿ, ಬಳಿಕ ಎರಡೂ ಕಡೆಯವರನ್ನು ಒಂದೇ ವೇದಿಕೆಯಲ್ಲಿ ಕೂರಿಸಿ ಒಮ್ಮತಕ್ಕೆ ತರಲು ಸುದೀರ್ಘ ಮಾತುಕತೆ ನಡೆಸಿದರು.

ಕೊನೆಗೆ ಕಾರ್ಖಾನೆಗಳು 3,500 ರೂ. ದರಕ್ಕೆ ಒಪ್ಪಿಗೆ ಸೂಚಿಸುವ ಮೂಲಕ ರೈತರ ಹೋರಾಟಕ್ಕೆ ತೆರೆ ಬಿತ್ತು. ಪ್ರಾಫಿಟ್ ಶೇರಿಂಗ್ ಹಣಕ್ಕಾಗಿ ಜಟಾಪಟಿ: ಟನ್ ಕಬ್ಬಿಗೆ 3,500 ರೂ. ಹಾಗೂ ಪ್ರಾಫಿಟ್ ಶೇರಿಂಗ್ ಹಣದಲ್ಲಿ 100 ರೂ. ನೀಡುವುದಾಗಿ ಕಾರ್ಖಾನೆಗಳು ಒಪ್ಪಿಗೆ ಸೂಚಿಸಿದ್ದರಿಂದ, ಕೆಲವು ರೈತರು ಪ್ರಾಫಿಟ್ ಶೇರಿಂಗ್ 100 ರೂ. ಬೇಡ ಬೆಳಗಾವಿ ಮಾದರಿಯಲ್ಲಿಒಪ್ಪಂದದಂತೆ ಸಕ್ಕರೆ ದರದ ಆಧಾರದ ಮೇಲೆ ಶೇ.75 ಹಾಗೂ ಶೇ.25ರಂತೆ ಹಂಚಿಕೆ ಮಾಡಬೇಕೆಂದು ಪಟ್ಟು ಹಿಡಿದರು.

ಸಭೆಯ ಬಳಿಕ ಮಾತನಾಡಿದ ಕಲಬುರಗಿ ಜಿಲ್ಲಾಧಿಕಾರಿ ಇಕ್ರಮ್ ಶರೀಫ್, "ರೈತರು ಹಾಗೂ ಕಾರ್ಖಾನೆಗಳ ಪ್ರತಿನಿಧಿಗಳೊಂದಿಗೆ ಸುದೀರ್ಘ ಚರ್ಚೆ ನಡೆಸಿ ಎರಡೂ ಕಡೆಯ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಒಮ್ಮತಕ್ಕೆ ತರಲಾಗಿದೆ. ಪ್ರತಿ ಟನ್‌ಗೆ 3,500 ರೂ. ದರ ನಿಗದಿಯಾಗಿದ್ದು, ಸಕ್ಕರೆ ಬೆಲೆ ಹೆಚ್ಚಾದ ಸಂದರ್ಭದಲ್ಲಿರೈತರಿಗೆ ಲಾಭಾಂಶದಲ್ಲಿಪಾಲು ನೀಡಲು ಸಹ ಒಪ್ಪಿಗೆ ದೊರೆತಿದೆ" ಎಂದು ಸ್ಪಷ್ಟಪಡಿಸಿದರು.

ಇದೇ ವಿಚಾರವಾಗಿ ಮಾತನಾಡಿದ ರೈತ ಮುಖಂಡ ಶಶಿಕಾಂತ್ ಗುರೂಜಿ, "3,600 ದರಕ್ಕಾಗಿ 16 ದಿನಗಳಿಂದ ರೈತರು ನಡೆಸಿದ ಹೋರಾಟಕ್ಕೆ ಇಂದು ಜಯ ಸಿಕ್ಕಿದೆ. ರೈತರ ಒಗ್ಗಟ್ಟು ಮತ್ತು ಹೋರಾಟದ ಫಲವಾಗಿ ಕಾರ್ಖಾನೆಗಳು ನಮ್ಮ ಬೇಡಿಕೆಗೆ ಮಣಿದಿವೆ. ಇದು ಕೇವಲ ದರದ ಗೆಲುವಲ್ಲ, ರೈತರ ಶ್ರಮಕ್ಕೆ ಸಿಕ್ಕ ಗೌರವ ಎಂದು ಹೇಳಿದರು.

ಇನ್ನು ಚೂನಪ್ಪ ಪೂಜಾರಿ ಮಾತನಾಡಿ, 3,450 ದರಕ್ಕೆ ರೈತರು ಒಪ್ಪುವುದಿಲ್ಲ ಎಂದು ಆರಂಭದಿಂದಲೂ ಸ್ಪಷ್ಟಪಡಿಸಿದ್ದೆವು. ಹೋರಾಟ ಮುಂದುವರಿಸಿದ್ದರಿಂದ ಕೊನೆಗೂ 3,500 ರೂ. ದರಕ್ಕಾಗಿ ಒಪ್ಪಂದವಾಗಿದೆ. ಸಕ್ಕರೆ ಬೆಲೆ ಹೆಚ್ಚಾದಾಗ ರೈತರಿಗೆ ಲಾಭಾಂಶದಲ್ಲಿ ಪಾಲು ನೀಡುವ ನಿರ್ಧಾರವೂ ಸ್ವಾಗತಾರ್ಹ ಎಂದು ಸಂತಸ ವ್ಯಕ್ತಪಡಿಸಿದರು. ಮಧ್ಯರಾತ್ರಿ ಸಾವಿರಾರು ರೈತರು ಕುಣಿದು ಕುಪ್ಪಳಿಸುತ್ತ ಪ್ರತಿಭಟನಾ ಸ್ಥಳದಿಂದ ತೆರಳಿದರು.


ಕಲಬುರಗಿ ಜಿಲ್ಲೆಯ ಕಬ್ಬು ಬೆಳೆಗಾರರು ಬೆಲೆ ನಿಗದಿಗಾಗಿ ನಡೆಸುತ್ತಿದ್ದ ಹೋರಾಟ ತೀವ್ರಗೊಂಡು ಜಿಲ್ಲಾಧಿಕಾರಿಗಳ ಕಚೇರಿ ಮುತ್ತಿಗೆ ಸಂದರ್ಭದಲ್ಲಿ ಸಹಸ್ರಾರು ರೈತರು ಪಾಲ್ಗೊಂಡ ದೃಶ್ಯ.

ಗಾಣಗಾಪುರ: ಧಾರ್ಮಿಕ ಹಕ್ಕಿಗಾಗಿ ಜಾಗೀರದಾರ ಮನೆತನ ಹೈಕೋರ್ಟ್ ಮೊರೆ

ಕಲಬುರಗಿ, ನ. 15: ಜಿಲ್ಲೆಯ ಸುಕ್ಷೇತ್ರ ದೇವಲ್‌ಗಾಣಗಾಪುರದ ಶ್ರೀ ದತ್ತಾತ್ರೇಯ ದೇವಸ್ಥಾನದಲ್ಲಿನ ಕೆಲ ಅರ್ಚಕರು ಜಾಗೀರದಾರ್ ಮನೆತನದ ಪಾರಂಪರಿಕ ಸೇವೆಗಳನ್ನು ಸಲ್ಲಿಸಲು ತೀವ್ರ ಅಡ್ಡಿಪಡಿಸುತ್ತಿದ್ದು, ನಮ್ಮ ಮನೆತನದ ಪಾರಂಪರಿಕ ಸೇವೆಗಳನ್ನು ಉಳಿಸಿಕೊಳ್ಳಲು ನ್ಯಾಯಾಲಯದ ಮೊರೆ ಹೋಗಬೇಕಾಯಿತು ಎಂದು ಮೀರಾ ಚೌದಾಪುರಕರ್ ಮತ್ತು ಜಾಗೀರದಾರ್ ಕುಟುಂಬಸ್ಥರ ಪರವಾಗಿ ಹರೀಶ್ ಅವರು ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದತ್ತಾತ್ರೇಯ ಕ್ಷೇತ್ರದೊಂದಿಗೆ ನಮ್ಮ ಜಾಗೀರದಾರ್ ಮನೆತನ ಹೊಂದಿರುವ ಸಂಬಂಧ ಕೇವಲ ಇಂದಿನದಲ್ಲ. ಅದು ನಮ್ಮ ಪೂರ್ವಜರಿಂದ ತಲೆತಲಾಂತರ ಗಳಿಂದ ನಡೆದುಕೊಂಡು ಬಂದಿರುವ ಐತಿಹಾಸಿಕ ಮತ್ತು ಧಾರ್ಮಿಕ ಸಂಬಂಧವಾಗಿದೆ. ನಮ್ಮ ಮನೆತನದ ಪಾರಂಪರಿಕ ಸೇವೆಗಳನ್ನು ಉಳಿಸಿಕೊಳ್ಳುವುದು ನಮ್ಮ ಹಕ್ಕು ಮಾತ್ರವಲ್ಲ, ನಮ್ಮ ಪೂರ್ವಜರು ನಮಗೆ ನೀಡಿರುವ ಜವಾಬ್ದಾರಿಯೂ ಆಗಿದೆ. ನಮ್ಮ ಉದ್ದೇಶ ಯಾರನ್ನೂ ನೋಯಿಸುವು ದಾಗಲಿ, ಯಾರ ವಿರುದ್ಧ ವೈಯಕ್ತಿಕ ದ್ವೇಷ ಸಾಧಿಸುವುದಾಗಲಿ ಅಲ್ಲ. ಸತ್ಯಾಂಶಗಳು, ಐತಿಹಾಸಿಕ ದಾಖಲೆಗಳು ಮತ್ತು ನ್ಯಾಯಾಲಯದ ಆದೇಶಗಳ ಆಧಾರದ ಮೇಲೆ ನಮ್ಮ ಪರಂಪರೆಯನ್ನು ಉಳಿಸಿಕೊಳ್ಳುವುದೇ ನಮ್ಮ ಏಕೈಕ ಉದ್ದೇಶ. ಪ್ರತಿಯೊಂದು ಆರೋಪಕ್ಕೂ ಸಂಬಂಧಿಸಿದ ದಾಖಲೆ, ನ್ಯಾಯಾಲಯದ ಆದೇಶ, ಪೊಲೀಸ್ ದಾಖಲೆ ಹಾಗೂ ಹಳೆಯ ಪಾರಂಪರಿಕ ದಾಖಲೆಗಳನ್ನು ಸಿದ್ಧವಾಗಿಟ್ಟು ಕೊಂಡಿದೆ. ನಮ್ಮ ಹೇಳಿಕೆಗಳು ಭಾವನಾತ್ಮಕವಾಗಿರದೆ, ಐತಿಹಾಸಿಕ ದಾಖಲೆಗಳು, ಧಾರ್ಮಿಕ ಪರಂಪರೆ ಮತ್ತು ಕಾನೂನು ಆಧಾರಿತ ಪ್ರಬಲ ಮಂಡನೆಯಾಗಿದೆ ಎಂದರು.

ಗಾಣಗಾಪುರದ ಜಾಗೀರದಾರ್ ಮನೆತನದ ಇತಿಹಾಸ, ಪರಂಪರೆ, ಧಾರ್ಮಿಕ ಸೇವೆಗಳು ಹಾಗೂ ಪ್ರಸ್ತುತ ಎದುರಾಗುತ್ತಿರುವ ಸಮಸ್ಯೆಗಳ ಕುರಿತು ವಿವರಿಸಿದ ಅವರು, ಜಾಗೀರದಾರ್ ಮನೆತನದ ಅಸ್ತಿತ್ವ ಮತ್ತು ಇತಿಹಾಸದ ಹಿನ್ನೆಲೆ ಹೊಂದಿದೆ. ಶ್ರೀ ದತ್ತಾತ್ರೇಯ ಕ್ಷೇತ್ರದೊಂದಿಗೆ ನಮ್ಮ ಮನೆತನ ಪಾರಂಪರಿಕ ಸಂಬಂಧ ಹೊಂದಿದೆ. ಅನೇಕ ವರ್ಷಗಳಿಂದ ಕ್ಷೇತ್ರದ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳಲ್ಲಿ ನಮ್ಮ ಮನೆತನದ ಕೊಡುಗೆ ಅಪಾರವಾಗಿದೆ. ಗಾಣಗಾಪುರದ ಶ್ರೀದತ್ತ ಕ್ಷೇತ್ರದ ನಿರ್ಗುಣ ಮಠದಲ್ಲಿ ನಮ್ಮ ಮನೆತನದ ಪಾರಂಪರಿಕ ಸೇವೆಗಳು ನಮ್ಮ ಮನೆತನವು ತಲೆತಲಾಂತರಗಳಿಂದ ನಡೆಸಿಕೊಂಡು ಬರುತ್ತಿರುವ ಧಾರ್ಮಿಕ ಸೇವೆಗಳಾಗಿವೆ. ನಿತ್ಯ ನೈವೇದ್ಯ ಸೇವೆ. ಪ್ರತಿ ದ್ವಾದಶಿಯಂದು ಮಹಾ ನೈವೇದ್ಯ ಸೇವೆ. ಗುರು ದ್ವಾದಶಿ ಮಹೋತ್ಸವ. ಶ್ರೀದತ್ತ ಜಯಂತಿ ಉತ್ಸವ. ಸಾಡೆ ಮೂರು ಮುಹೂರ್ತಗಳಲ್ಲಿ ವಿಶೇಷ ದರ್ಶನ ಭಾಗ್ಯ ಹಾಗೂ ಧಾರ್ಮಿಕ ಸೇವೆಗಳೊಂದಿಗೆ ಮಠ ದೊಂದಿಗೆ ನಮ್ಮ ಮನೆತನ ಹೊಂದಿರುವ ಸಂಪ್ರದಾಯಬದ್ಧ ಧಾರ್ಮಿಕ ಸಂಬಂಧ ಇದೆ ಎಂದರು.

ಇತ್ತೀಚಿನ ದಿನಗಳಲ್ಲಿ ನಮ್ಮ ಮನೆತನದ ವಿರುದ್ಧ ಅನೇಕ ಬೆಳವಣಿಗೆಗಳು ನಡೆಯುತ್ತಿವೆ. ಕೆಲವು ಅರ್ಚಕರಿಂದ ನಮ್ಮ ಮನೆತನದ ವಿರುದ್ಧ ಷಡ್ಯಂತ್ರಗಳು ನಡೆಯುತ್ತಿವೆ. ನಮ್ಮ ಪಾರಂಪರಿಕ ಧಾರ್ಮಿಕ ಕರ್ಮಕಾಂಡ ಹಾಗೂ ಸೇವೆಗಳನ್ನು ಸ್ಥಗಿತಗೊಳಿಸುವ ಪ್ರಯತ್ನಗಳಾಗುತ್ತಿವೆ. ನಮ್ಮ ಮನೆತನದ ಕೊಡುಗೆ ಅಪಾರವಾಗಿದೆ. ನಮ್ಮ ಪೂರ್ವಜರಿಂದ ನಡೆದುಕೊಂಡು ಬಂದ ಸಂಪ್ರದಾಯಗಳಿಗೆ ಅಡ್ಡಿಪಡಿಸಲಾಗುತ್ತಿದೆ ಎಂದು ದೂರಿದ ಅವರು, ನ್ಯಾಯಾಲಯದ ಆದೇಶದ ಮೂಲಕ ನಮ್ಮ ಪಾರಂಪರಿಕ ಗುರು ದ್ವಾದಶಿ ಉತ್ಸವ ಆಚರಣೆಗಾಗಿ ನಮ್ಮ ಹಕ್ಕು ಮತ್ತು ಧಾರ್ಮಿಕ ಆಚರಣೆಗಳ ರಕ್ಷಣೆಗಾಗಿ ನ್ಯಾಯಾಲಯದ ಮೊರೆ ಹೋಗಿ ಆದೇಶ ತರಬೇಕಾಯಿತು ಎಂದರು.

ನ್ಯಾಯಾಲಯದ ಆದೇಶ ಪಡೆದು ಪೊಲೀಸ್ ರಕ್ಷಣೆಯೊಂದಿಗೆ ಶ್ರೀದತ್ತಕ್ಷೇತ್ರದ ನಿರ್ಗುಣ ಮಠದಲ್ಲಿ ನಮ್ಮ ಮನೆತನದ ಪಾರಂಪರಿಕ ಗುರು ದ್ವಾದಶಿ ಉತ್ಸವ ಆಚರಿಸಲಾಗಿದೆ. ನ್ಯಾಯಾಂಗದ ಆದೇಶಗಳನ್ನು ಗೌರವಿಸಬೇಕು ಮತ್ತು ಪಾರಂಪರಿಕ ಆಚರಣೆಗಳಿಗೆ ನ್ಯಾಯಯುತ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದ ಅವರು, ನಮ್ಮ ಮನೆತನದ ಗೌರವ ಮತ್ತು ಪ್ರತಿಷ್ಠೆಗೆ ಧಕ್ಕೆ ತರುತ್ತಿರುವ ಹೇಳಿಕೆಗಳನ್ನು ಕೆಲವು ಅರ್ಚಕರು ಯಾವುದೇ ಸೂಕ್ತ ಆಧಾರವಿಲ್ಲದೆ ಹೇಳುತ್ತಿದ್ದಾರೆ. ಅವಹೇಳನ ಹಾಗೂ ಅಸಭ್ಯವಾಗಿ ವರ್ತಿಸಲಾಗುತ್ತಿದೆ. ಇದರಿಂದ ಮನೆತನದ ಗೌರವ, ಪ್ರತಿಷ್ಠೆ ಮತ್ತು ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಗದ್ಗುರುಗಳ ಹೆಸರನ್ನು ಬಳಸಿಕೊಂಡು ಅನೇಕರು ಅಡ್ಡಿ ಮಾಡುತ್ತಿದ್ದಾರೆ. ಜಗದ್ಗುರು ವಿಧುಶೇಖರ ಭಾರತೀ ತೀರ್ಥ ಸ್ವಾಮೀಜಿಗಳ ಹೆಸರು ಬಳಸಿಕೊಂಡು ನಮ್ಮ ಪಾರಂಪರಿಕ ಉತ್ಸವ ತಡೆಯು ಪ್ರಯತ್ನ ಮತ್ತು ನಮ್ಮ ಮನೆತನವನ್ನು ದತ್ತಕ್ಷೇತ್ರದಿಂದ ದೂರವಿಡುವ ಪ್ರಯತ್ನಗಳು ನಡೆಯುತ್ತಿವೆ. ಜಗದ್ಗುರುಗಳ ಬಗ್ಗೆ ನಮಗೆ ಅಪಾರ ಗೌರವವಿದ್ದು, ಅವರ ಹೆಸರನ್ನು ಯಾವುದೇ ವಿವಾದಕ್ಕೆ ಬಳಸುವದನ್ನು ನಾವೂ ವಿರೋದಿಸುತ್ತೇವೆ ಎಂದರು.



ಡಾ. ಜಿ. ಪರಮೇಶ್ವರ್: 40 ವರ್ಷಗಳ ರಾಜಕೀಯ ಪಯಣ ಮೆಲುಕು

ಡಾ. ಜಿ. ಪರಮೇಶ್ವರ್‌ಗೆ ಮುಖ್ಯಮಂತ್ರಿ ಸ್ಥಾನ ಒಲಿದು ಬರಲಿ: ಸಿದ್ದಗಂಗಾ ಶ್ರೀಗಳ ಬಹಿರಂಗ ಹಾರೈಕೆ

ತುಮಕೂರು, ನ.15: ರಾಜ್ಯ ಕಾಂಗ್ರೆಸ್ ರಾಜಕಾರಣದಲ್ಲಿ ಮುಖ್ಯ ಮಂತ್ರಿ ಹುದ್ದೆಯ ಚರ್ಚೆಗಳು ಆಗಾಗ ಕೇಳಿಬರುತ್ತಿರುವ ನಡುವೆಯೇ, ಉಪಮುಖ್ಯಮಂತ್ರಿ ಡಾ.ಜಿ. ಪರ ಮೇಶ್ವರ್ ಅವರು ತಮಗೆ ಉನ್ನತ ಹುದ್ದೆ ಕೈತಪ್ಪಿದ ಬಗ್ಗೆ ವೇದಿಕೆಯ ಮೇಲೆಯೇ ಮತ್ತೊಮ್ಮೆ ಭಾವುಕರಾಗಿ ಬೇಸರ ಹೊರಹಾಕಿದ್ದಾರೆ. ತಮ್ಮ ಸುಮಾರು 40 ವರ್ಷಗಳ ಸುದೀರ್ಘ ರಾಜಕೀಯ ಪಯಣದ ಏಳುಬೀಳು ಗಳನ್ನು ಸ್ಮರಿಸಿಕೊಂಡರು.

1989ರಲ್ಲಿ ವಿದೇಶದಿಂದ ಬಂದು ಹೊಸದಾಗಿ ರಾಜಕೀಯ ಪ್ರವೇಶಿಸಿದ ತಮಗೆ, ಹಲವು ಸಂದರ್ಭಗಳಲ್ಲಿ ಉನ್ನತ ಹುದ್ದೆಗಳು ಕೈತಪ್ಪಿ ಹೋಗಿವೆ ಎಂದು ಪರಮೇಶ್ವರ್ ನೋವು ತೋಡಿಕೊಂಡರು. ಅನೇಕ ಬಾರಿ ಸಚಿವನಾಗಿ, ವಿವಿಧ ಖಾತೆಗಳನ್ನು ನಿರ್ವಹಿಸಿರುವುದಾಗಿ ತಿಳಿಸಿದ ಡಾ. ಜಿ. ಪರಮೇಶ್ವರ್, ಜಿಲ್ಲೆಯ ಜನರ ಆಶೀರ್ವಾದದಿಂದ ಉಪಮುಖ್ಯಮಂತ್ರಿ ಯಾಗಿಯೂ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿದೆ ಎಂದರು. "ನಾವೆಲ್ಲರೂ ಇಲ್ಲಿ ಶಾಶ್ವತವಲ್ಲ, ಒಂದಲ್ಲ ಒಂದು ದಿನ ನಿರ್ಗಮಿಸುತ್ತೇವೆ. ಆದರೆ ಅಧಿಕಾರ ದಲ್ಲಿದ್ದಾಗ ಜನರು ಸ್ಮರಿಸುವಂತಹ ಕೆಲಸಗಳನ್ನು ಮಾಡಬೇಕು" ಎಂದು ಅವರು ಅಭಿಪ್ರಾಯಪಟ್ಟರು.



ಇದೇ ವೇಳೆ, ಶಿಕ್ಷಣ ಕ್ಷೇತ್ರದ ಮೇಲಿನ ತಮ್ಮ ಕಳಿಸಿಂದಾಗಿ ತುಮಕೂರು ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು, ಇಂದು ಸಾವಿರಾರು ವಿದ್ಯಾರ್ಥಿಗಳು ಅಲ್ಲಿ ಶಿಕ್ಷಣ ಪಡೆಯುತ್ತಿರುವುದು ತಮಗೆ ತೃಪ್ತಿ ತಂದಿದೆ ಎಂದು ಹೇಳಿದರು. ಮತ್ತೊಂದೆಡೆ, ತುಮಕೂರಿನಲ್ಲಿ ನಡೆದ ಎಲ್‌ಇಡಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಅವರು, ಡಾ.ಜಿ.ಪರಮೇಶ್ವರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಒಲಿದು ಬರಲಿ ಎಂದು ಬಹಿರಂಗವಾಗಿಯೇ ಹಾರೈಸಿದ್ದಾರೆ. ವೇದಿಕೆಯ ಮೇಲೆ ಮಾತನಾಡಿದ ಶ್ರೀಗಳು, "ಇವತ್ತು ಪರಮೇಶ್ವರ್ ಅವರು ಉಪಮುಖ್ಯಮಂತ್ರಿ ಯಾಗಿದ್ದಾರೆ, ಆದರೆ ಅವರು ಮುಖ್ಯಮಂತ್ರಿಯಾಗ ಬೇಕಿರುವ ಕೆಲಸವೊಂದು ಬಾಕಿ ಇದೆ. ಸಿಎಂ ಆಗಬೇಕು ಎಂಬ ಆಸೆ ಎಲ್ಲರಿಗೂ ಇರುತ್ತದೆ, ಮುಂದಿನ ದಿನಗಳಲ್ಲಿ ಆ ಅವಕಾಶ ಅವರಿಗೆ ಲಭ್ಯವಾಗಲಿ" ಎಂದು ಆಶೀರ್ವದಿಸಿದರು.

ರಾಜಕಾರಣದಲ್ಲಿ ಯಾರಿಗೆ, ಯಾವಾಗ ಅವಕಾಶಗಳು ಸಿಗುತ್ತವೆ ಎಂದು ಹೇಳಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟ ಸಿದ್ದಗಂಗಾ ಶ್ರೀಗಳು, ಪರಮೇಶ್ವರ್ ಅವರ ಅಭಿವೃದ್ಧಿ ಪರ ಚಿಂತನೆಗಳನ್ನು ಶ್ಲಾಘಿಸಿದರು. ಜಿಲ್ಲೆಯ ಸಮಗ್ರ ಅಭಿವೃದ್ಧಿ ಹಾಗೂ ವಿಶೇಷವಾಗಿ ತುಮಕೂರಿಗೆ ಮೆಟ್ರೋ ರೈಲು ತಂದರೆ ತಮ್ಮ ಜೀವನ ಸಾರ್ಥಕ ವಾಗುತ್ತದೆ ಎಂದು ಪರಮೇಶ್ವರ್ ಅವರು ಶ್ರಮಿಸುತ್ತಿದ್ದಾರೆ ಎಂದರು.

ತರಗತಿಗೆ ಹಾಜರಾಗಬೇಕೋ, ಪರೀಕ್ಷೆ ಬರೆಯಬೇಕೋ

ಬೀದರ್, ನ . 15: ತರಗತಿಗೆ ಹಾಜರಾಗಬೇಕೋ ಅಥವಾ ಪರೀಕ್ಷೆ ಬರೆಯಬೇಕೋ...? ಇದು ಬೀದರ್ ವಿಶ್ವವಿದ್ಯಾಲಯದ ಸ್ನಾತಕೋತ್ತರ (ಪಿಜಿ) ಪದವಿ ವಿದ್ಯಾರ್ಥಿಗಳಲ್ಲಿ ಮೂಡಿರುವ ಪ್ರಶ್ನೆ. ಪರೀಕ್ಷೆಯೊಟ್ಟಿಗೆ ಹೊಸ ಸ



ಇರಾನ್ ಬಳಿ ಇನ್ನೂ 2,500 ಕ್ಷಿಪಣಿ ಸಂಗ್ರಹ: ಅಮೆರಿಕದ ಗುಪ್ತಚರ ವರದಿ

ಟೆಹ್ರಾನ್,ನ.15: ಇರಾನ್ ತನ್ನ ಶಸ್ತ್ರಾಗಾರದಲ್ಲಿ ಇನ್ನೂ 1,500 ರಿಂದ 2,500 ಕ್ಷಿಪಣಿಗಳನ್ನು ಹೊಂದಿದೆ. ಒಂದು ವೇಳೆ ಯುದ್ಧ ಮರುಕಳಿಸಿದರೆ, ಮಧ್ಯಪ್ರಾಚ್ಯದಲ್ಲಿರುವ ಅಮೆರಿಕದ ಸೇನಾ ನೆಲೆಗಳು ಮತ್ತು ಅದರ ಮಿತ್ರರಾಷ್ಟ್ರಗಳ ಮೇಲೆ ದಾಳಿ ಮಾಡಲು ಇರಾನ್ ಬಳಿ ಸಾಕಷ್ಟು ಶಸ್ತ್ರಾಸ್ತ್ರಗಳಿವೆ ಎಂದು ಅಮೆರಿಕದ ಗುಪ್ತಚರ ವರದಿ ತಿಳಿಸಿದೆ.



ಗುಪ್ತಚರ ವರದಿ ಮತ್ತು ಇರಾನ್ ಕ್ಷಿಪಣಿ ಸಾಮರ್ಥ್ಯ: ಇರಾನ್ ಎಷ್ಟು ಕ್ಷಿಪಣಿಗಳನ್ನು ಸಂಗ್ರಹಿಸಿಟ್ಟಿದೆ ಅಥವಾ ಬಳಕೆಗೆ ಸಿದ್ಧವಾಗಿರಿಸಿದೆ ಎಂಬುದನ್ನು ನಿಖರವಾಗಿ ಪತ್ತೆಹಚ್ಚುವುದು ಕಷ್ಟಕರವಾಗಿರುವುದರಿಂದ ಈ ಅಂದಾಜು ಸಂಪೂರ್ಣವಾಗಿ ವಿಶ್ವಾಸಾರ್ಹವಲ್ಲ ಎಂದು ಅಮೆರಿಕದ ಅಧಿಕಾರಿಗಳು ತಿಳಿಸಿದ್ದಾರೆ. ಯುದ್ಧದ ಸಮಯದಲ್ಲಿ ಅಮೆರಿಕ ಮತ್ತು ಇಸ್ರೇಲ್ ಪಡೆಗಳು ಇರಾನ್‌ನ ಕ್ಷಿಪಣಿ ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಿದ್ದವು. ಆದರೆ, ಇರಾನ್ ತನ್ನ ಶಸ್ತ್ರಾಸ್ತ್ರ ಸಂಗ್ರಹವನ್ನು ಮರುನಿರ್ಮಾಣ ಮಾಡುವುದನ್ನು ಮುಂದುವರಿಸಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಏಪ್ರಿಲ್‌ನಲ್ಲಿ ಪ್ರಕಟವಾದ ವಾಲ್‌ಸ್ಟ್ರೀಟ್ ಜರ್ನಲ್ ವರದಿಯ ಪ್ರಕಾರ, ಇರಾನ್ ಈ ನೆಲೆಗಳಲ್ಲಿ ಸಾವಿರಾರು ಅಲ್ಪ ಮತ್ತು ಮಧ್ಯಮ-ಶ್ರೇಣಿಯ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹೊಂದಿತ್ತು. ಅಮೆರಿಕ ಮತ್ತು ಇಸ್ರೇಲ್ ದಾಳಿಗಳು ಈ ಕೆಲವು ನೆಲೆಗಳ ಪ್ರವೇಶದ್ವಾರಗಳನ್ನು ಮುಚ್ಚಿದ್ದವು. ಆದಾಗ್ಯೂ, ಇರಾನ್ ಅವಶೇಷಗಳನ್ನು ತೆರವುಗೊಳಿಸಿ ಕೆಲವು ನೆಲೆಗಳನ್ನು ಮರಳಿ ಪ್ರವೇಶಿಸುವಲ್ಲಿ ಯಶಸ್ವಿಯಾಗಿದೆ ಎಂದು ಉಪಗ್ರಹ ಚಿತ್ರಗಳು ನಂತರ ತೋರಿಸಿವೆ.

ಹಳೆಯ ಬಿಡಿಭಾಗಗಳ ಬಳಕೆ ಮತ್ತು ಸುಧಾರಿತ ತಂತ್ರಗಾರಿಕೆ:

ಹೊಸ ಕ್ಷಿಪಣಿಗಳನ್ನು ತಯಾರಿಸಲು ಇರಾನ್ ಈ ಹಿಂದೆ ಸಂಗ್ರಹಿಸಿಟ್ಟಿದ್ದ ಬಿಡಿಭಾಗಗಳನ್ನು ಬಳಸಿಕೊಳ್ಳುತ್ತಿದೆ ಎಂದು ವರದಿ ತಿಳಿಸಿದೆ. ಯುದ್ಧಕ್ಕೂ ಮುನ್ನ ಇದ್ದ ವೇಗಕ್ಕೆ ಹೋಲಿಸಿದರೆ ಕ್ಷಿಪಣಿಗಳ ಉತ್ಪಾದನೆ ಕಡಿಮೆಯಾಗಿದ್ದರೂ, ಇರಾನ್ ತನ್ನ ಶತ್ರುಗಳ ವಿರುದ್ಧ ಬಳಸಲು ಡ್ರೋನ್ ಮತ್ತು ಅಲ್ಪಶ್ರೇಣಿಯ ಕ್ಷಿಪಣಿಗಳನ್ನು ಹೊಂದಿದೆ. ಇಸ್ರೇಲಿ ಸೇನಾ ಅಧಿಕಾರಿಗಳ ಪ್ರಕಾರವೂ ಇರಾನ್ ಬಳಿ 1,500 ಕ್ಕೂ ಹೆಚ್ಚು ಬ್ಯಾಲಿಸ್ಟಿಕ್ ಕ್ಷಿಪಣಿಗಳಿವೆ. ಇರಾನ್ 1,500 ಕ್ಷಿಪಣಿಗಳನ್ನು ಉಳಿಸಿಕೊಂಡಿದ್ದರೂ, ಅದು ತನ್ನ ಯುದ್ಧಪೂರ್ವದ ಶಸ್ತ್ರಾಸ್ತ್ರಗಳ ಸಂಗ್ರಹದ ಅರ್ಧಕ್ಕಿಂತ ಹೆಚ್ಚಿನದನ್ನು ಮರುನಿರ್ಮಾಣ ಮಾಡಿದೆ ಎಂದರ್ಥ ಎಂದು ಮಧ್ಯಪ್ರಾಚ್ಯದ ಮಾಜಿ ಅಮೆರಿಕದ ಉಪಸಹಾಯಕ ರಕ್ಷಣಾ ಕಾರ್ಯದರ್ಶಿ ಸಿಮೋನ್ ಲೆಡೀನ್ ಹೇಳಿದ್ದಾರೆ.

'ಮಿಸೈಲ್ ಸಿಟಿ' ಮತ್ತು ಕ್ಷಿಪಣಿ ಉತ್ಪಾದನೆ:

ಕಳೆದ ವಾರ, ಇರಾನ್ 'ಮಿಸೈಲ್ ಸಿಟಿ' (ಕ್ಷಿಪಣಿ ನಗರ) ಎಂದು ಕರೆಯಲ್ಪಡುವ ಹೊಸ ಭೂಗತ ನೆಲೆಯನ್ನು ಪ್ರದರ್ಶಿಸಿದೆ ಎಂದು ದಿ ಟೈಮ್ಸ್ ಆಫ್ ಇಸ್ರೇಲ್ ವರದಿ ಮಾಡಿದೆ. ಇರಾನ್ ಬಳಿ ಇನ್ನೂ ಕನಿಷ್ಠ 1,700 ಬ್ಯಾಲಿಸ್ಟಿಕ್ ಕ್ಷಿಪಣಿಗಳಿರಬಹುದು ಮತ್ತು ಅದು ಪ್ರತಿ ತಿಂಗಳು 50 ಹೊಸ ಕ್ಷಿಪಣಿಗಳನ್ನು ತಯಾರಿಸುತ್ತಿದೆ ಎಂದು ಪಾಶ್ಚಿಮಾತ್ಯ ಅಧಿಕಾರಿಯೊಬ್ಬರು ಬ್ಲೂಮ್‌ಬರ್ಗ್‌ಗೆ ತಿಳಿಸಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಇರಾನ್ ದಾಳಿ ಹಿಮ್ಮೆಟ್ಟಿಸಲಾಗಿದೆ: ಬಹ್ರೇನ್ ಸೇನೆ

ಬಹ್ರೇನ್,ನ.15: ಭಾನುವಾರ ಮುಂಜಾನೆ ಬಹ್ರೇನ್‌ನಲ್ಲಿರುವ ಅಮೆರಿಕ ನೆಲೆಯ ರೇಡಾರ್ ವ್ಯವಸ್ಥೆಯ ಮೇಲೆ ತಮ್ಮ ಪಡೆಗಳು ಡ್ರೋನ್ ದಾಳಿ ನಡೆಸಿವೆ ಎಂದು ಇರಾನ್‌ನ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ತಿಳಿಸಿರುವುದಾಗಿ ಸರ್ಕಾರಿ ಪ್ರಸಾರ ಮಾಧ್ಯಮ ವರದಿ ಮಾಡಿದೆ. ನಂತರ, ಇರಾನ್‌ನ ವೈಮಾನಿಕ ದಾಳಿಗಳನ್ನು ತಡೆಹಿಡಿದಿರುವುದಾಗಿ ಬಹ್ರೇನ್ ಹೇಳಿದೆ. ಅಮೆರಿಕ ದಾಳಿಗಳಿಗೆ ಪ್ರತೀಕಾರವಾಗಿ ಯುದ್ಧದ ಆರಂಭಿಕ ತಿಂಗಳುಗಳಲ್ಲಿ ಇರಾನ್ ಬಹ್ರೇನ್ ಮೇಲೆ ಪದೇ ಪದೇ ದಾಳಿ ನಡೆಸಿತ್ತು, ಆದರೆ ಸೆಪ್ಟೆಂಬರ್ ನಂತರ ಯಾವುದೇ ಪ್ರಮುಖ ದಾಳಿಗಳು ವರದಿಯಾ ಗಿರಲಿಲ್ಲ.

ಇನ್ನೊಂದೆಡೆ, ವಿರೋಧ ಪಕ್ಷದ ನಾಯಕ ಗಾಡಿ ಐಸೆನ್ಕೋಟ್ ಅವರೊಂದಿಗೆ ಒಗ್ಗಟ್ಟಿನ ಸರ್ಕಾರ ರಚಿಸುವ ಕುರಿತು ಮಾತನಾಡಿದ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಅಭಿವೃದ್ಧಿಪಡಿಸುವ ಸಾಧ್ಯತೆಯನ್ನು ಪ್ರಸ್ತಾಪಿಸಿದರು ಮತ್ತು ಈ ಬೆದರಿಕೆಯನ್ನು "ಶಾಶ್ವತವಾಗಿ ಕೊನೆಗಾಣಿಸುವ" ಸಮಯ ಬಂದಿದೆ ಎಂದು ಹೇಳಿದರು. ಹಾರ್ಮುಜ್ ಜಲಸಂಧಿಯಲ್ಲಿ ರಾತ್ರೋರಾತ್ರಿ ಮೂರು ತೈಲ ಟ್ಯಾಂಕರ್‌ಗಳು ಸಮುದ್ರ ಬಾಂಬ್‌ಗಳಿಗೆ ಡಿಕ್ಕಿ ಹೊಡೆದು ಬೆಂಕಿ ಹೊತ್ತಿಕೊಂಡಿವೆ ಎಂದು ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್ ಕಾರ್ಪ್ಸ್ ತಿಳಿಸಿದೆ. ಆದರೆ ಅವರು ಹಡಗುಗಳ ಹೆಸರುಗಳನ್ನು ಬಹಿರಂಗಪಡಿಸಿಲ್ಲ ಮತ್ತು ಈ ದಾಳಿಗಳನ್ನು ಸ್ವತಂತ್ರವಾಗಿ ದೃಢೀಕರಿಸಲು ಸಾಧ್ಯವಾಗಿಲ್ಲ.

ಬಹ್ರೇನ್‌ನ ಅಮೆರಿಕ ನೆಲೆಗಳ ಮೇಲೆ ದಾಳಿ ನಡೆಸಿರುವುದಾಗಿ ಇರಾನ್ ಹೇಳಿಕೆ: ಬಹ್ರೇನ್‌ನಲ್ಲಿರುವ ಗಖ ನೆಲೆಯ ರೇಡಾರ್ ವ್ಯವಸ್ಥೆಯ ಮೇಲೆ ತಮ್ಮ ಪಡೆಗಳು ಡ್ರೋನ್ ದಾಳಿ ನಡೆಸಿವೆ ಎಂದು ಇರಾನ್ ಸೇನೆ ತಿಳಿಸಿರುವುದಾಗಿ ಇರಾನ್ ಸರ್ಕಾರಿ ಪ್ರಸಾರ ಮಾಧ್ಯಮ ಭಾನುವಾರ ವರದಿ ಮಾಡಿದೆ. "ಬಹ್ರೇನ್‌ನಲ್ಲಿರುವ ಅಲ್-ರಿಫಾ ಹೆಲಿಕಾಪ್ಟರ್ ನೆಲೆಯಲ್ಲಿರುವ ಗಖ ವಾಯು ರಕ್ಷಣಾ ರೇಡಾರ್ ವ್ಯವಸ್ಥೆಯನ್ನು ಖಖಖಅ ಏರೋಸ್ಪೇಸ್ ಫೋರ್ಸ್‌ನ ಆರು ಡ್ರೋನ್‌ಗಳು ಗುರಿಯಾಗಿಸಿ ಕೊಂಡಿದ್ದವು," ಎಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಟೆಲಿಗ್ರಾಮ್‌ನಲ್ಲಿ ಪೋಸ್ಟ್ ಮಾಡಿದ ಹೇಳಿಕೆಯಲ್ಲಿ ತಿಳಿಸಿದೆ. ನಂತರ, ಇರಾನ್ನ ವೈಮಾನಿಕ ದಾಳಿಗಳನ್ನು ಅವುಗಳ ಗುರಿಯನ್ನು ತಲುಪುವ ಮೊದಲೇ ತಡೆಹಿಡಿದ ರುವುದಾಗಿ ಬಹ್ರೇನ್ ಸೇನೆ ಹೇಳಿದೆ. ಸಾರ್ವಜನಿಕರ ಸುರಕ್ಷತೆಗಾಗಿ ನಿವಾಸಿಗಳು "ಶಾಂತಿಯನ್ನು ಕಾಪಾಡಿಕೊಳ್ಳಬೇಕು, ಹತ್ತಿರದ ಸುರಕ್ಷಿತ ಸ್ಥಳಕ್ಕೆ ತೆರಳಬೇಕು ಮತ್ತು ಅಧಿಕೃತ ಮಾಧ್ಯಮಗಳ ಮೂಲಕ ಬರುವ ಸುದ್ದಿಗಳನ್ನು ಅನುಸರಿಸಬೇಕು" ಎಂದು ಆಂತರಿಕ ಸಚಿವಾಲಯ ಮನವಿ ಮಾಡಿದೆ.

5ನೇ ಏಕದಿನ ಪಂದ್ಯ: ನ್ಯೂಜಿಲೆಂಡ್ ವಿರುದ್ಧ ಭಾರತಕ್ಕೆ ರೋಚಕ ಜಯ, ಶ್ರೇಯಸ್ ಪಡೆಗೆ ಸರಣಿ ಗೌರವ

ನ್ಯೂಜಿಲೆಂಡ್,ನ.15: ಬೇ ಓವಲ್ನಲ್ಲಿ ಭಾನುವಾರ ನಡೆದ ಐದನೇ ಮತ್ತು ಅಂತಿಮ ಏಕದಿನ ಪಂದ್ಯದಲ್ಲಿ ಭಾರತ 22 ರನ್‌ಗಳಿಂದ ನ್ಯೂಜಿಲೆಂಡ್ ಅನ್ನು ಸೋಲಿಸಿತು, ದೇಶದಲ್ಲಿ ತನ್ನ ಮೂರನೇ ಏಕದಿನ ಸರಣಿಯನ್ನು ಗೆದ್ದುಕೊಂಡಿತು. 209 ರನ್‌ಗಳಿಗೆ ಆಲೌಟ್ ಆದ ನಂತರ, ಕಡಿಮೆ ಸ್ಕೋರಿಂಗ್ ಸ್ಪರ್ಧೆಯಲ್ಲಿ ಭಾರತದ ಬೌಲರ್‌ಗಳು ಆತಿಥೇಯರನ್ನು 48.1 ಓವರ್‌ಗಳಲ್ಲಿ 187 ರನ್‌ಗಳಿಗೆ ಸೀಮಿತಗೊಳಿಸಿದರು.

ಈ ಗೆಲುವಿನೊಂದಿಗೆ ಶ್ರೇಯಸ್ ಅಯ್ಯರ್ ನಾಯಕತ್ವದ ಭಾರತವು ಐದು ಪಂದ್ಯಗಳ ಏಕದಿನ ಸರಣಿಯನ್ನು 3–1 ಅಂತರದಿಂದ ವಶಪಡಿಸಿಕೊಂಡಿದೆ (ಮೂರನೇ ಪಂದ್ಯದ ಮಳೆಯಿಂದ ರದ್ದಾಗಿತ್ತು).



ಬೇ ಓವಲ್ ಮೈದಾನದಲ್ಲಿ ನಡೆದ ಈ ಫ್ಯಾಡ್ ಟಾಸ್ ಸೋತು ಬ್ಯಾಟಿಂಗ್ ಮಾಡಿದ ಭಾರತ ತಂಡವು ಕಿವೀಸ್ ಬೌಲರ್ ದಾಳಿಗೆ ತತ್ತರಿಸಿ 42.1 ಪಂದ್ಯಗಳಲ್ಲಿ 209 ರನ್‌ಗಳಿಗೆ ಆಲೌಟ್ ಆಯಿತು. ಸಾಧಾರಣ ಗುರಿ ಬೆನ್ನತ್ತಿದ ನ್ಯೂಜಿಲೆಂಡ್ ತಂಡವನ್ನು ಭಾರತೀಯ ಬೌಲರ್‌ಗಳು 48.1 ಸ್ಪರ್ಧೆಗಳಲ್ಲಿ 187 ರನ್‌ಗಳಿಗೆ ಕಟ್ಟಿಹಾಕುವ ಮೂಲಕ ಸ್ಮರಣೀಯ ಗೆಲುವು ತಂದುಕೊಟ್ಟರು.

ಕುಸಿದ ಅಗ್ರಕ್ರಮಾಂಕ, ಅಕ್ಷರ-ಇಶಾನ್ ಆಸರೆ:

ಮೊದಲು ಬ್ಯಾಟಿಂಗ್‌ಗೆ ಇಳಿದ ಭಾರತಕ್ಕೆ ಆದರಲ್ಲೇ ಎದುರಾಯಿತು. ನಾಲ್ಕನೇ ಆಟಗಾರ ಹೀನಾಯ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ ತಂಡ, ಈ ಪಂದ್ಯದಲ್ಲೂ ಕೇವಲ 34 ರನ್ನಿಗೆ ಪ್ರಮುಖ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ರೋಹಿತ್ ಶರ್ಮಾ (7), ವಿರಾಟ್ ಕೊಹ್ಲಿ (5) ಹಾಗೂ ನಿರ್ದೇಶಕ ರಾಜ್ ಗಾಯಕ್ವಾಡ್ (18) ಬೇಗನೆ ಪೆವಿಲಿಯನ್ ಸೇರಿದರು. ನಾಯಕ ಶ್ರೇಯಸ್ ಅಯ್ಯರ್ 22 ರನ್ ಗಳಿಸಿ ಔಟಾದರು.

ಈ ಹಂತದಲ್ಲಿ ತಂಡಕ್ಕೆ ಆಸರೆಯಾದ ಅಕ್ಷರ್ ಪಟೇಲ್ (46 ರನ್) ಹಾಗೂ ವಿಕೆಟ್ ಕೀಪರ್ ಇಶಾನ್ ಕಿಶನ್ (46 ರನ್) ಜವಾಬ್ದಾರಿಯುತ ಬ್ಯಾಟಿಂಗ್ ನಡೆಸಿ ತಂಡದ ಮೊತ್ತವನ್ನು 150ರ ಗಡಿ ದಾಟಿಸಿದರು. ಅಂತಿಮ ಹಂತದಲ್ಲಿ ನಮನ್ ಧೀರ್ (22) ಹಾಗೂ ಮೊಹಮ್ಮದ್ ಸಿರಾಜ್ ಅವರ ಬಿರುಸಿನ ಬ್ಯಾಟಿಂಗ್ ನೆರವಿನಿಂದ ಭಾರತ 200ರ ಗಡಿ ದಾಟಿ 209 ರನ್ ಕಲೆಹಾಕಿತು.


ಕಿವೀಸ್‌ಗೆ ಕಡಿವಾಣ ಹಾಕಿದ ಭಾರತೀಯ ಬೌಲರ್‌ಗಳು

210 ರನ್‌ಗಳ ಸುಲಭ ಗುರಿ ಬೆನ್ನತ್ತಿದ ನ್ಯೂಜಿಲೆಂಡ್ ತಂಡಕ್ಕೆ ಭಾರತದ ವೇಗಿಗಳಾದ ಅರ್ಷದೀಪ್ ಸಿಂಗ್ ಮತ್ತು ಮೊಹಮ್ಮದ್ ಸಿರಾಜ್ ಆರಂಭದಿಂದಲೇ ಒತ್ತಡ ಹೇರಿದರು. ಫಿನ್ ಅಲೆನ್ (1) ಮತ್ತು ಟಿಮ್ಸೀಫರ್ಟ್ (14) ಬೇಗನೆ ಬೇಗನೆ ಒಪ್ಪಿದರು. ಮಧ್ಯಮ ಕ್ರಮಾಂಕದಲ್ಲಿ ಡೀನ್ ಫಾಕ್ಸ್‌ಕ್ರಫ್ಟ್ (31), ನಿಕ್ ಕೆಲ್ಲಿ (24), ವಿಲ್ ಯಂಗ್ (22) ಹಾಗೂ ನಾಯಕ ಮಿಚೆಲ್ ಸ್ಯಾಂಟ್ನರ್ ಹೋರಾಟ ನಡೆಸಿದರೂ ಗೆಲುವಿನ ದಡ ಸೇರಲು ಸಾಧ್ಯವಾಗಲಿಲ್ಲ. ಅಂತಿಮ ಹಂತದಲ್ಲಿ ಬ್ಲೇರ್ ಟಿಕ್ನರ್ ಅವರನ್ನು ಅಕ್ಷರ ಪಟೇಲ್ ಬೌಲಿಂಗ್‌ನಲ್ಲಿ ಇಶಾನ್ ಕಿಶನ್ ಸ್ಟಂಪ್ ಔಟ್ ಮಾಡುವ ಮೂಲಕ ಭಾರತದ ಗೆಲುವನ್ನು ಖಚಿತಪಡಿಸಿದರು. ಪರ ಅರ್ಷದೀಪ್ ಸಿಂಗ್ 3 ವಿಕೆಟ್ ಪಡೆದರೆ, ಮೊಹಮ್ಮದ್ ಸಿರಾಜ್ ಮತ್ತು ಅಕ್ಷರ್ ಪಟೇಲ್ ತಲಾ 2 ವಿಕೆಟ್ ಪಡೆದು ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಕಿವೀಸ್ ಪರ ಮಿಚೆಲ್ ಸ್ಯಾಂಟ್ನರ್, ಜಾಕೋಬ್ ಡಫಿ ಮತ್ತು ಮ್ಯಾಟ್ ಫಿಶರ್ ತಲಾ 3 ವಿಕೆಟ್ ಪಡೆದು ಮಿಂಚಿದರು.

ಕಕ್ಷೆಯಿಂದ ಲ್ಯಾಂಡಿಂಗ್ ಪ್ಯಾಡ್‌ಗೆ ಯಶಸ್ವಿಯಾಗಿ ಮರಳಿದ ಸ್ಪೇಸ್‌ಎಕ್ಸ್ ಬೃಹತ್ ಸ್ಟಾರ್‌ಶಿಪ್

ವಾಷಿಂಗ್ಟನ್, ನ.15: ಸ್ಪೇಸ್‌ಎಕ್ಸ್‌ನ ಬೃಹತ್ ಸ್ಟಾರ್‌ಶಿಪ್ ಉಡಾವಣಾ ವ್ಯವಸ್ಥೆಯ ಮೇಲಿನ ಅಥವಾ ಎರಡನೇ ಹಂತವಾದ 171 ಅಡಿ ಎತ್ತರದ ಸ್ಟಾರ್‌ಶಿಪ್ ಬಾಹ್ಯಾಕಾಶ ನೌಕೆಯು, ದಕ್ಷಿಣ ಟೆಕ್ಸಾಸ್‌ನಲ್ಲಿರುವ ಕಂಪನಿಯ 'ಮೆಕಾಜಿಲ್ಲಾ' ಉಡಾವಣಾ ಗೋಪುರಕ್ಕೆ ಅಭೂತ ಪೂರ್ವ ರೀತಿಯಲ್ಲಿ ಯಶಸ್ವಿಯಾಗಿ ಮರಳಿ ಇಳಿದಿದೆ. ರಾಕೆಟ್ ತಂತ್ರಜ್ಞಾನದ ಇತಿಹಾಸದಲ್ಲಿಯೇ ಇಂತಹದೊಂದು ಸಾಹಸವನ್ನು ಹಿಂದೆಂದೂ ಪ್ರಯತ್ನಿಸಿರಲಿಲ್ಲ. ಬಾಹ್ಯಾಕಾಶದಲ್ಲಿ ಒಂದು ಪೂರ್ಣ ದಿನ ಕಳೆದ ನಂತರ, ಈ ನೌಕೆಯನ್ನು ಭೂಮಿಯ ಮೇಲಿನ ಉಡಾವಣಾ ಗೋಪುರವು ಯಶಸ್ವಿಯಾಗಿ ಹಿಡಿದಿಟ್ಟುಕೊಂಡಿದೆ (ಕ್ಯಾಚ್ ಮಾಡಿದೆ). ನವೆಂಬರ್ 13 ರಂದು ಸುಮಾರು 22:45 GMT ಸಮಯಕ್ಕೆ, ಸ್ಪೇಸ್‌ಎಕ್ಸ್ ದಕ್ಷಿಣ ಟೆಕ್ಸಾಸ್‌ನಲ್ಲಿರುವ ತನ್ನ ಬಾಹ್ಯಾಕಾಶ ನಿಲ್ದಾಣದಿಂದ ಸ್ಟಾರ್‌ಶಿಪ್‌ನ 15ನೇ ಪರೀಕ್ಷಾರ್ಥ ಉಡಾವಣೆಯನ್ನು ನಡೆಸಿತು.



ಈ ಹಾರಾಟಕ್ಕೂ ಮುನ್ನ, ರಾಕೆಟ್ ವ್ಯವಸ್ಥೆಯ ಎರಡೂ ಭಾಗಗಳಾದ 'ಸೂಪರ್ ಹೆವಿ ಬೂಸ್ಟರ್' ಮತ್ತು 'ಸ್ಟಾರ್‌ಶಿಪ್' ಮೇಲಿನ ಹಂತ'ವನ್ನು ಉಡಾವಣಾ ಸ್ಥಳಕ್ಕೆ ಮರಳಿ ತರಲು ಉದ್ದೇಶಿಸಲಾಗಿದೆ ಎಂದು ಕಂಪನಿಯ ಸಿಇಒ ಎಲಾನ್ ಮಸ್ಕ್ ತಿಳಿಸಿದ್ದರು.

ಸ್ಟಾರ್‌ಶಿಪ್ ಬಾಹ್ಯಾಕಾಶ ನೌಕೆಯು ಭೂಮಿಯ ಕಕ್ಷೆಯನ್ನು ತಲುಪಿ, ಅಲ್ಲಿ ಸ್ಟಾರ್‌ಲಿಂಕ್ ಇಂಟರ್ನೆಟ್ ಉಪಗ್ರಹಗಳನ್ನು ನಿಯೋಜಿಸಿತು ಮತ್ತು 22 ಗಂಟೆಗಳ ಕಾಲ ಬಾಹ್ಯಾಕಾಶದಲ್ಲಿ ಹಾರಾಟ ನಡೆಸಿತು. ಲ್ಯಾಂಡಿಂಗ್ ಆಗುವ ಮೊದಲು ಈ ನೌಕೆಯು ಭೂಮಿಗೆ ಒಟ್ಟು 14 ಸುತ್ತುಗಳನ್ನು ಹಾಕಿತು. ನೌಕೆಯನ್ನು ಗೋಪುರವು ಯಶಸ್ವಿಯಾಗಿ ಹಿಡಿದಿಟ್ಟುಕೊಂಡ ಕೆಲವೇ ಗಂಟೆಗಳಲ್ಲಿ ಮಸ್ಕ್ ಮತ್ತು ಸ್ಪೇಸ್‌ಎಕ್ಸ್ ಎಂಜಿನಿಯರ್‌ಗಳು ಅದರ ಪರಿಶೀಲನೆಯನ್ನು ಪ್ರಾರಂಭಿಸಿದರು.

ಮಾಜಿ ಪ್ರಧಾನಿ ಶೇಖ್ ಹಸೀನಾ ಬಾಂಗ್ಲಾದೇಶಕ್ಕೆ ಮರಳಲು ಕಾನೂನು ಪ್ರಕ್ರಿಯೆ ಪೂರ್ಣ

ನವದೆಹಲಿ,ನ.15: ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರು ಕಾನೂನುಬದ್ಧವಾಗಿ ಬಾಂಗ್ಲಾದೇಶಕ್ಕೆ ಮರಳಲಿದ್ದಾರೆ ಎಂದು ಬಾಂಗ್ಲಾದೇಶದ ಕಾನೂನು ಸಚಿವ ಅಸಾದುಜ್ಜಮಾನ್ ಭಾನುವಾರ ತಿಳಿಸಿದ್ದಾರೆ. ಬಾಂಗ್ಲಾದೇಶ ತನ್ನ ಕಡೆಯಿಂದ ಅಗತ್ಯವಿರುವ ಎಲ್ಲಾ ಕಾನೂನು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ್ದು, ಮುಂದಿನ ನಡೆ ಭಾರತಕ್ಕೆ ಬಿಟ್ಟದ್ದು ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಹಸೀನಾ ಅವರ ಹಸ್ತಾಂತರಕ್ಕೆ ನವದೆಹಲಿಯು ಕೆಲವು ಷರತ್ತುಗಳನ್ನು ವಿಧಿಸಿದೆ ಎಂಬ ವರದಿಗಳ ನಡುವೆ ಅವರ ಈ ಹೇಳಿಕೆ ಹೊರಬಿದ್ದಿದೆ.

ಮುಂದಿನ ನಡೆ ಭಾರತದ ವಿವೇಚನೆಗೆ:

ಬಾಂಗ್ಲಾದೇಶದ ಪತ್ರಿಕೆಯೊಂದರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅಸಾದುಜ್ಜಮಾನ್, ಶೇಖ್ ಹಸೀನಾ ಅವರು ಕಾನೂನುಬದ್ಧವಾಗಿ ಬಾಂಗ್ಲಾದೇಶಕ್ಕೆ ಮರಳಲಿದ್ದಾರೆ ಹಾಗೂ ಕಾನೂನು ಪ್ರಕ್ರಿಯೆಯ ಭಾಗವಾಗಿ ನಮ್ಮ ಕಡೆಯಿಂದ ಅಗತ್ಯವಿರುವ ಎಲ್ಲವನ್ನೂ ನಾವು ಪೂರ್ಣಗೊಳಿಸಿದ್ದೇವೆ ಎಂದು ತಿಳಿಸಿದ್ದಾರೆ. ಈ ವಿಚಾರದಲ